PRGI NO : KNKAN/26/A0884

E NAMMA DHURTHI NEWS KANNADA DAILY NEWS PAPER

# ಈ ನಮ್ಮ ಧೃತಿ ನ್ಯೂಸ್

ಸದೃಢತೆಯ ಹೆಜ್ಜೆಯೊಂದಿಗೆ..., ಕನ್ನಡ ದಿನಪತ್ರಿಕೆ

- ಕೊಪ್ಪಳ
- ವಿಜಯನಗರ
- ರಾಯಚೂರು
- ಬಳ್ಳಾರಿ
- ಗದಗ
- ಬಾಗಲಕೋಟೆ
- ಹಾವೇರಿ
- ಧಾರವಾಡ

ಸಂಪಾದಕರು: ಚಂದ್ರಕಾಂತ | ಸಂಪುಟ: 01 ಸಂಚಿಕೆ: 173 ಪುಟಗಳು: 04 ಬೆಲೆ: 02 ದಿನಾಂಕ: 26-08-2026 ಬುಧವಾರ | email: enammadhruthinews@gmail.com Pho : 7353595904

## ಕೊಪ್ಪಳ ಇನ್ನರ್ ವೀಲ್ ಕ್ಲಬ್ ವತಿಯಿಂದ ಉಚಿತ ದಂತ ಚಿಕಿತ್ಸೆ ತಪಾಸಣಾ ಶಿಬಿರ

ಧೃತಿ ನ್ಯೂಸ್ ಸುದ್ದಿ

ಕೊಪ್ಪಳ: ಇನ್ನರ್ ವೀಲ್ ಕ್ಲಬ್, ಕೊಪ್ಪಳ ವತಿಯಿಂದ ಕ್ಲಬ್ಬಿನ ದತ್ತಕ ಶಾಲೆಯಾದ ತಾಲೂಕಿನ ದದೇಗಲ್ ಗ್ರಾಮದ ಸರ್ಕಾರಿ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಉಚಿತ ದಂತ ಚಿಕಿತ್ಸಾ ಆರೋಗ್ಯ ತಪಾಸಣಾ ಶಿಬಿರವನ್ನು ಯಶಸ್ವಿಯಾಗಿ ಜರುಗಿತು.



ಈ ಶಿಬಿರದಲ್ಲಿ ದಂತ ವೈದ್ಯರಾದ ಡಾ. ಹೀನಾ ಅವರು ಶಾಲೆಯ ಎಲ್ಲಾ ವಿದ್ಯಾರ್ಥಿಗಳ ದಂತ ತಪಾಸಣೆ ನಡೆಸಿ, ಪ್ರತಿಯೊಬ್ಬ ವಿದ್ಯಾರ್ಥಿಗೂ ಉಚಿತವಾಗಿ ಟೂತ್‌ಬ್ರಶ್ ಮತ್ತು ಟೂತ್‌ಪೇಸ್ಟ್ ವಿತರಿಸಿದರು. ಅಲ್ಲದೆ, ಅವರು ಪ್ರತಿ ಶನಿವಾರ ಉಚಿತ ಸಲಹೆ ಹಾಗೂ ಚಿಕಿತ್ಸಾ ಮಾರ್ಗದರ್ಶನವನ್ನು ನೀಡುವುದಾಗಿ ತಿಳಿಸಿದರು. ಡಾ. ಹೀನಾ ಅವರು 1ನೇ ತರಗತಿಯಿಂದ 8ನೇ ತರಗತಿಯವರೆಗೆ ಎಲ್ಲಾ ವಿದ್ಯಾರ್ಥಿಗಳಿಗೆ ದಂತ ಆರೈಕೆ ಕಿಟ್‌ಗಳನ್ನು ಪ್ರಾಯೋಜಿಸಿದ್ದು, ಅವರ ಈ ಸಮಾಜಮುಖಿ ಸೇವೆ ಅತ್ಯಂತ ಶ್ಲಾಘನೀಯವಾಗಿದೆ. ಕಾರ್ಯಕ್ರಮವು ಅತ್ಯಂತ ಯಶಸ್ವಿಯಾಗಿ ಹಾಗೂ ಮನಮುಟ್ಟುವ ರೀತಿಯಲ್ಲಿ ನಡೆಯಿತು ಎಂದು ಕಾರ್ಯಕ್ರಮದ ನೇತೃತ್ವ ವಹಿಸಿದ ಕೊಪ್ಪಳ ಇನ್ನರ್ ವೀಲ್ ಕ್ಲಬ್ ಅಧ್ಯಕ್ಷರಾದ ಮೀನಾಕ್ಷಿ ಬಣ್ಣದಬಾವಿ ತಿಳಿಸಿ ಸಹಕರಿಸಿದ ಪ್ರತಿಯೊಬ್ಬರಿಗೂ ಅಭಿನಂದಿಸಿದರು. ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ ಇನ್ನರ್ ವೀಲ್ ಕ್ಲಬ್ ಸದಸ್ಯರಾದ ಹಿರಿಯ ಸದಸ್ಯೆ ರಾಧಾ ಕುಲಕರ್ಣಿ ಸಂಪಾದಕಿ ಮಾಲಾ, ಐ.ಎಸ್.ಓ. ಲತಾ, ಹಾಗೂ ಕಾರ್ಯಕಾರಿ ಸಮಿತಿ ಸದಸ್ಯೆಯರಾದ ಶರಣಮ್ಮ ಪಾಟೀಲ್, ಪಾರ್ವತಿ ಪಾಟೀಲ್, ಶಾರದಾ ಮತ್ತು ತ್ರಿಶಾಲಾ ಅವರು ತಮ್ಮ ಅಮೂಲ್ಯ ಸಹಕಾರವನ್ನು ನೀಡಿ ಉಚಿತದಂತ ಚಿಕಿತ್ಸಾ ತಪಾಸಣಾ ಆರೋಗ್ಯ ಶಿಬಿರ ಯಶಸ್ವಿಗೊಳಿಸಿರುವುದಕ್ಕೆ ಅವರೆಲ್ಲರಿಗೂ ಅಭಿನಂದಿಸಲಾಯಿತು. ಈ ಕಾರ್ಯಕ್ರಮದ ಯಶಸ್ಸಿಗೆ ಶ್ರಮಿಸಿದ ಡಾ. ಹೀನಾ ಅವರಿಗೆ, ಕ್ಲಬ್ ಸದಸ್ಯರಿಗೆ ಹಾಗೂ ಕಾರ್ಯಕ್ರಮ ನಡೆಸಲು ಅವಕಾಶ ನೀಡಿದ ಶಾಲೆಯ ಮುಖ್ಯೋಪಾಧ್ಯಾಯರು ಮತ್ತು ಎಲ್ಲಾ ಶಿಕ್ಷಕ ವೃಂದಕ್ಕೆ ಕ್ಲಬ್ ಪರವಾಗಿ ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸುವದಾಗಿ ಅಧ್ಯಕ್ಷರಾದ ಮೀನಾಕ್ಷಿ ಬಣ್ಣದ ಭಾವಿ ತಿಳಿಸಿದರು.

## ಜಿಲ್ಲೆಯಾದ್ಯಂತ ಮದ್ಯ ಮಾರಾಟ ನಿಷೇಧ : ಜಿಲ್ಲಾಧಿಕಾರಿ ಪೂವಿತಾ ಎಸ್.

ಧೃತಿ ನ್ಯೂಸ್ ಸುದ್ದಿ

ರಾಯಚೂರು: ರಾಯಚೂರು ಜಿಲ್ಲೆಯಾದ್ಯಂತ ಈದ್-ಮಿಲಾದ್ ಹಬ್ಬವನ್ನು ಆಚರಣೆ ಮಾಡಲಿದ್ದು, ಹಬ್ಬದ ನಿಮಿತ್ತ ಧಾರ್ಮಿಕ ವಿಶೇಷ ಪ್ರಾರ್ಥನೆಗಳು ಹಾಗೂ ಮೆರವಣಿಗೆ ಮಾಡುತ್ತಿರುವ



ಹಿನ್ನೆಲೆಯಲ್ಲಿ ಶಾಂತಿ, ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ಉದ್ದೇಶದಿಂದ ದಿನಾಂಕ:25-8-2026ರ ರಾತ್ರಿ 10ಗಂಟೆಯಿಂದ ದಿನಾಂಕ: 27-08-2026ರ ಬೆಳಿಗ್ಗೆ 06ಗಂಟೆಯವರೆಗೆ ರಾಯಚೂರು ಜಿಲ್ಲೆಯಾದ್ಯಂತ ಮದ್ಯ ಮಾರಾಟ, ಮದ್ಯ ಸಾಗಾಣಿಕೆಯನ್ನು ಅಬಕಾರಿ ಕಾಯ್ದೆ 1965ರ ಕಲಂ.21 (1) ರನ್ವಯ ರಾಯಚೂರು ಜಿಲ್ಲೆಯಾದ್ಯಂತ ನಿಷೇಧಿಸಿ, ನಿಷೇಧಾಜ್ಞೆಯನ್ನು ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳಾದ ಪೂವಿತಾ ಎಸ್. ಅವರು ಆದೇಶ ಹೊರಡಿಸಿದ್ದಾರೆ.

ನಿಗದಿತ ದಿನಗಳಂದು ಎಲ್ಲಾ ರೀತಿಯ ಮದ್ಯ ತಯಾರಿಕಾ ಘಟಕಗಳು, ಸಾಗಾಣಿಕೆ ಮತ್ತು ಸಂಗ್ರಹಣೆಯನ್ನು ಅಥವಾ ಮಾರಾಟ ಮಳಿಗೆಗಳನ್ನು ಬಂದ್ ಇಡುವಂತೆ ಜಿಲ್ಲಾಧಿಕಾರಿಗಳು ನಿಷೇಧಾಜ್ಞೆ ಆದೇಶದಲ್ಲಿ ತಿಳಿಸಿದ್ದಾರೆ.

## ಈದ್ ಮಿಲಾದ್ ಅಂಗವಾಗಿ ಗಂಗಾವತಿಯಲ್ಲಿ ಪೊಲೀಸರ ರೂಟ್ ಮಾರ್ಚ್



ಧೃತಿ ನ್ಯೂಸ್ ಸುದ್ದಿ

ಗಂಗಾವತಿ: ಈದ್ ಮಿಲಾದ್ ಹಬ್ಬದ ಹಿನ್ನೆಲೆಯಲ್ಲಿ ಗಂಗಾವತಿ ನಗರದಲ್ಲಿ ಶಾಂತಿ, ಸುವ್ಯವಸ್ಥೆ ಹಾಗೂ ಸುರಕ್ಷತೆ ಕಾಪಾಡುವ ಉದ್ದೇಶದಿಂದ ಪೊಲೀಸ್ ಇಲಾಖೆ ವತಿಯಿಂದ ರೂಟ್ ಮಾರ್ಚ್ ನಡೆಸಲಾಯಿತು.

ಕೊಪ್ಪಳದ ಹೆಚ್ಚುವರಿ ಪೊಲೀಸ್ ಅಧೀಕ್ಷಕರು ಹಾಗೂ ಗಂಗಾವತಿ ಡಿವೈಎಸ್ಪಿ ಜೆ.ಎಸ್. ನ್ಯಾಮಗೌಡರ್ ಅವರ ನೇತೃತ್ವದಲ್ಲಿ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿ ನಗರದ ವಿವಿಧ ಬಡಾವಣೆಗಳಲ್ಲಿ ರೂಟ್ ಮಾರ್ಚ್ ನಡೆಸಿ, ಸಾರ್ವಜನಿಕರಲ್ಲಿ ಧೈರ್ಯ ಹಾಗೂ ಭದ್ರತೆಯ ಭರವಸೆ ಮೂಡಿಸಿದರು. ನಗರದ ಪ್ರಮುಖ ರಸ್ತೆಗಳು ಹಾಗೂ ಸೂಕ್ಷ್ಮ ಪ್ರದೇಶಗಳಲ್ಲಿ ಪೊಲೀಸರು ಪಥಸಂಚಲನ ನಡೆಸಿದರು. ಹಬ್ಬದ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಮುನ್ನೆಚ್ಚರಿಕೆ ಕ್ರಮವಾಗಿ ಪೊಲೀಸ್ ಬಂದೋಬಸ್ತ್ ಕೈಗೊಳ್ಳಲಾಗಿದೆ. ಸಾರ್ವಜನಿಕರು ಶಾಂತಿ ಮತ್ತು ಸೌಹಾರ್ದತೆಯಿಂದ ಹಬ್ಬ ಆಚರಿಸುವಂತೆ ಪೊಲೀಸ್ ಇಲಾಖೆ ಮನವಿ ಮಾಡಿದೆ. ರೂಟ್ ಮಾರ್ಚ್‌ನಲ್ಲಿ ಪೊಲೀಸ್ ಅಧಿಕಾರಿಗಳು, ಸಿಬ್ಬಂದಿ ಸೇರಿದಂತೆ ಹೆಚ್ಚಿನ ಸಂಖ್ಯೆಯ ಪೊಲೀಸರು ಭಾಗವಹಿಸಿದ್ದರು.

# ಹಿರಿಯ ಶಾಸಕರ ಬಂಡಾಯ ತಣಿಸಲು ಮತ್ತೆ ಸಂಪುಟ ಪುನಾರಚನೆ

ಬೆಂಗಳೂರು: ಹಿರಿಯ ಶಾಸಕರು ಬಂಡಾಯದ ಬಾವುಟ ಹಿಡಿದಿರುವ ಹಿನ್ನೆಲೆಯಲ್ಲಿ ಕೆಲವರನ್ನು ಸಮಾಧಾನಪಡಿಸಲು ಸಂಪುಟದಲ್ಲಿರುವ ಕೆಲವು ಹಿರಿಯ ಸಚಿವರನ್ನು ಕೈಬಿಟ್ಟು ಅಸಮಾಧಾನಿತ ಶಾಸಕರಿಗೆ ಅವಕಾಶ ಕಲ್ಪಿಸುವ ಕುರಿತು ಚರ್ಚೆಗಳು ನಡೆಯುತ್ತಿವೆ.

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಗುರುವಾರ ದೆಹಲಿಗೆ ತೆರಳುವ ಸಾಧ್ಯತೆಯಿದ್ದು, ಹೈಕಮಾಂಡ್ ನಾಯಕರೊಂದಿಗೆ ಸಚಿವ ಸಂಪುಟ ಪುನಾರಚನೆ, ವಿಧಾನ ಪರಿಷತ್‌ನ ನಾಲ್ಕು ಸ್ಥಾನಗಳಿಗೆ ಸದಸ್ಯರ ನಾಮನಿರ್ದೇಶನ, ನಿಗಮ-ಮಂಡಳಿಗಳ ಅಧ್ಯಕ್ಷರು ಹಾಗೂ ನಿರ್ದೇಶಕರ ಆಯ್ಕೆ, ಜಿಲ್ಲಾಧ್ಯಕ್ಷರ ನೇಮಕ ಮತ್ತು 100 ಕಾಂಗ್ರೆಸ್ ಕಚೇರಿಗಳ ಶಂಕುಸ್ಥಾಪನೆ ಸೇರಿದಂತೆ ಹಲವು ಮಹತ್ವದ ವಿಚಾರಗಳ ಕುರಿತು ಚರ್ಚೆ ನಡೆಸಲಿದ್ದಾರೆ ಎಂದು ತಿಳಿದುಬಂದಿದೆ. ಸದ್ಯ ಸಂಪುಟದಲ್ಲಿ 33 ಸಚಿವರಿದ್ದು, ಒಂದು ಸ್ಥಾನ ಖಾಲಿ ಉಳಿದಿದೆ. ಈ ಸ್ಥಾನ ಭರ್ತಿ ಮಾಡುವುದು ಕಗ್ಗಂಟಾಗಿದೆ. ಕಾಂಗ್ರೆಸ್‌ನ ಶಾಸಕರಾದ ಲಕ್ಷ್ಮೀ ಹೆಬ್ಬಾಳ್ಕರ್, ಖನೀಜ್ ಫಾತಿಮಾ, ನಯನ ಮೋಟಮ್ಮ, ಅನ್ನಪೂರ್ಣ ತುಕಾರಾಂ ಹಾಗೂ ವಿಧಾನ ಪರಿಷತ್ ಸದಸ್ಯರಾದ ಗಾಯತ್ರಿ ಶಾಂತೇಗೌಡ, ಆರತಿ ಕೃಷ್ಣ, ಬಲ್ಕೀಸ್ ಬಾನು ಸೇರಿದಂತೆ ಹಲವರು ಮಹಿಳಾ ಕೋಟಾದಡಿ ಸಚಿವ ಸ್ಥಾನಕ್ಕಾಗಿ ಪೈಪೋಟಿ ನಡೆಸುತ್ತಿದ್ದಾರೆ.

ಈ ನಡುವೆ ವಿಜಯನಗರದ ಶಾಸಕ



ಎಂ.ಕೃಷ್ಣಪ್ಪ, ಗೋವಿಂದರಾಜನಗರ ಕ್ಷೇತ್ರದ ಶಾಸಕ ಪ್ರಿಯಕೃಷ್ಣ, ಶಿರಾ ಕ್ಷೇತ್ರದ ಶಾಸಕ ಟಿ.ಬಿ.ಜಯಚಂದ್ರ ಸೇರಿದಂತೆ ಹಲವರು ಸಚಿವ ಸ್ಥಾನಕ್ಕಾಗಿ ಬಿಗಿಪಟ್ಟು ಹಿಡಿದಿದ್ದಾರೆ. ಈ ಬಾರಿ ಸಂಪುಟದಲ್ಲಿ ಸ್ಥಾನ ಸಿಗದಿದ್ದರೆ, ಮುಂದಿನ ಚುನಾವಣೆಯಲ್ಲಿ ತಮ್ಮದೇ ದಾರಿ ನೋಡಿಕೊಳ್ಳುವುದಾಗಿ ಕೆಲವರು ಎಚ್ಚರಿಕೆ ನೀಡಿದ್ದಾರೆ ಎನ್ನಲಾಗಿದೆ. ಅಸಮಾಧಾನಿತರನ್ನು ಸಮಾಧಾನಪಡಿಸಲು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಾನಾ ರೀತಿಯ ಕಸರತ್ತು ನಡೆಸಿದ್ದಾರೆ. ಟಿ.ಬಿ.ಜಯಚಂದ್ರ ಅವರು ದೆಹಲಿ ವಿಶೇಷ ಪ್ರತಿನಿಧಿ ಸ್ಥಾನದಿಂದ ತೃಪ್ತರಾಗಿಲ್ಲ ಎನ್ನಲಾಗಿದ್ದು, ಮುಂದಿನ ಚುನಾವಣೆಯಲ್ಲಿ ತಾವು ಸ್ಪರ್ಧಿಸುವ ಸಾಧ್ಯತೆ ಕಡಿಮೆ ಇರುವ ಹಿನ್ನೆಲೆಯಲ್ಲಿ ಪ್ರಸಕ್ತ ಅವಧಿಯಲ್ಲೇ ಸಚಿವ ಸ್ಥಾನ ನೀಡಬೇಕೆಂದು ಬಿಗಿಪಟ್ಟು ಹಿಡಿದಿದ್ದಾರೆ ಎನ್ನಲಾಗಿದೆ. ಇದಕ್ಕೆ ಪರ್ಯಾಯವಾಗಿ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಅವರ ಪುತ್ರನಿಗೆ ಬಿ-ಫಾರಂ ನೀಡುವುದರ ಜೊತೆಗೆ ಪ್ರಸಕ್ತ ಅವಧಿಯಲ್ಲಿ ನಿಗಮ-ಮಂಡಳಿ ಸೇರಿದಂತೆ ಸೂಕ್ತ ಹುದ್ದೆ ನೀಡುವ ಪ್ರಸ್ತಾಪ ಮಾಡಲಾಗಿದೆ ಎಂದು ತಿಳಿದುಬಂದಿದೆ.

ಆದರೆ ಎಂ.ಕೃಷ್ಣಪ್ಪ ಅವರು ಯಾವುದೇ ಕಾರಣಕ್ಕೂ ಸಚಿವ ಸ್ಥಾನವನ್ನು ಹೊರತುಪಡಿಸಿ ಬೇರೆ ಆಯ್ಕೆ ಬೇಡ ಎಂಬ ನಿಲುವು ತಳೆದಿದ್ದಾರೆ ಎನ್ನಲಾಗಿದೆ. ಪ್ರಿಯಕೃಷ್ಣ ಅವರಿಗೆ ನಿಗಮ-ಮಂಡಳಿಯಲ್ಲಿ ಅವಕಾಶ ನೀಡುವ ಪ್ರಸ್ತಾಪವನ್ನೂ ಎಂ.ಕೃಷ್ಣಪ್ಪ ತಳ್ಳಿ ಹಾಕಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಬೆಂಗಳೂರಿನಲ್ಲಿ ಕಾಂಗ್ರೆಸ್‌ಗೆ ಎಂ.ಕೃಷ್ಣಪ್ಪ ಮತ್ತು ಪ್ರಿಯಕೃಷ್ಣ ಅವರ ಬೆಂಬಲ ಆನೆಬಲದಂತಿದೆ. ಅವರು ವ್ಯತಿರಿಕ್ತ ನಿರ್ಧಾರ ತೆಗೆದುಕೊಂಡರೆ ಕಾಂಗ್ರೆಸ್‌ಗೆ ಭಾರಿ ಪ್ರಮಾಣದ ನಷ್ಟವಾಗಲಿದೆ ಎಂಬ ಆತಂಕ ರಾಜ್ಯ ನಾಯಕರಲ್ಲಿದೆ. ಇದರೊಂದಿಗೆ ಇನ್ನೂ ಕೆಲವು ಹಿರಿಯ ಶಾಸಕರು ಸಚಿವ ಸ್ಥಾನಕ್ಕಾಗಿ ಪಟ್ಟು ಹಿಡಿದಿದ್ದಾರೆ. ಮೂಲಗಳ ಪ್ರಕಾರ, ಈಗ ರಚನೆಯಾಗಿರುವ 33 ಮಂದಿಯ ಸಂಪುಟದಲ್ಲಿ ಯಾವುದೇ ಬದಲಾವಣೆ ಮಾಡದಂತೆ ಹೈಕಮಾಂಡ್ ಈಗಾಗಲೇ ಖಡಕ್ ಸಂದೇಶ ರವಾನಿಸಿದೆ. ಆದರೆ ಸದ್ಯದ ರಾಜಕೀಯ ಪರಿಸ್ಥಿತಿಯ ಒತ್ತಡಕ್ಕೆ ಮಣಿದು ಕೆಲವು ಬದಲಾವಣೆಗಳನ್ನು ಮಾಡುವುದು ಸೂಕ್ತ ಎಂದು ಹೈಕಮಾಂಡ್ ಮನವೊಲಿಸಲು ರಾಜ್ಯ ನಾಯಕರು ಪ್ರಯತ್ನಿಸುತ್ತಿದ್ದಾರೆ ಎನ್ನಲಾಗಿದೆ. ಸಂಪುಟದಲ್ಲಿರುವ ಕೆಲವು ತಟಸ್ಥ ಹಾಗೂ ಹಿರಿಯ ಸಚಿವರನ್ನು ಕೈಬಿಟ್ಟು ಜನಪ್ರಿಯ ನಾಯಕರಿಗೆ ಮಣೆ ಹಾಕಬೇಕು ಎಂಬುದು ರಾಜ್ಯ ನಾಯಕರ ಒತ್ತಾಯವಾಗಿದೆ ಎನ್ನಲಾಗಿದೆ. ಈ ಹಿನ್ನೆಲೆಯಲ್ಲಿ ಚರ್ಚೆ ನಡೆಸಲು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ದೆಹಲಿಯತ್ತ ಮುಖ ಮಾಡಿದ್ದಾರೆ.

ವಿಧಾನಸಭಾ ಅಧಿವೇಶನ ಮುಕ್ತಾಯಗೊಂಡ ಬೆನ್ನಲ್ಲೇ ಮುಖ್ಯಮಂತ್ರಿಯವರ ದೆಹಲಿ ಪ್ರವಾಸ ಕುತೂಹಲ ಕೆರಳಿಸಿದ್ದು, ಸಂಪುಟ ಪುನಾರಚನೆ ನಡೆಯಲಿದೆಯೇ ಎಂಬ ಚರ್ಚೆ ಮತ್ತೆ ಮುನ್ನೆಲೆಗೆ ಬಂದಿದೆ.

### ಇಂದರಗಿ ಗ್ರಾಮದ ಹೊಸಕೆರೆ ಪುನಶ್ಚೇತನ ಕಾಮಗಾರಿ ಪರಿಶೀಲನೆ

## ವಿಬಿಜಿ ರಾಮ್ ಜೀ ಯೋಜನೆಯಡಿ ಪ್ರತಿ ಕುಟುಂಬಕ್ಕೆ 125 ದಿನಗಳ ಕೂಲಿ ಕೆಲಸ : ಕೊಪ್ಪಳ ತಾ.ಪಂ. ಸಹಾಯಕ ನಿರ್ದೇಶಕಿ ಸೌಮ್ಯ ಕೆ.

ಧೃತಿ ನ್ಯೂಸ್ ಸುದ್ದಿ

ಕೊಪ್ಪಳ: ವಿಕಸಿತ ಭಾರತ ಜಿರಾಮ್ ಜೀ ಯೋಜನೆಯಡಿ ಪ್ರತಿ ಕುಟುಂಬಕ್ಕೆ ಸ್ಥಳೀಯವಾಗಿ 125 ದಿನಗಳ ಕೂಲಿ ಕೆಲಸ ನಿರ್ವಹಿಸಲು ಅವಕಾಶವಿದ್ದು, ಪ್ರತಿ ಕುಟುಂಬವು 125 ದಿನಗಳ ಕೂಲಿ ಕೆಲಸ ನಿರ್ವಹಿಸಬೇಕೆಂದು ತಾಲೂಕ ಪಂಚಾಯತ ಸಹಾಯಕ ನಿರ್ದೇಶಕಿ ಸೌಮ್ಯ ಕೆ ಕರೆ ನೀಡಿದರು.

ಮಂಗಳವಾರದಂದು ಇಂದರಗಿ ಗ್ರಾಮ ಪಂಚಾಯತಿ ವತಿಯಿಂದ ಇಂದರಗಿ ಗ್ರಾಮದ ಹೊಸಕೆರೆ ಪುನಶ್ಚೇತನ ಮತ್ತು ಅಭಿವೃದ್ಧಿ ಕಾಮಗಾರಿಯ ಕೆಲಸ ನಿರ್ವಹಿಸುತ್ತಿರುವ ಕೂಲಿಕಾರರನ್ನು ಉದ್ದೇಶಿಸಿ ಅವರು ಮಾತನಾಡಿದರು. ವಿಬಿಜಿ ರಾಮ್ ಜೀ ಯೋಜನೆಯು ಗ್ರಾಮೀಣ ಭಾಗದ ಕೂಲಿಕಾರರು ಗುಳೆ ಹೋಗದಂತೆ ತಡೆದು ಒಂದು ಕುಟುಂಬಕ್ಕೆ ಸ್ಥಳೀಯವಾಗಿ 125 ದಿನಗಳ ಕೂಲಿ ಕೆಲಸ ನೀಡುವ ಉದ್ದೇಶ ಹೊಂದಿದೆ. ಪುರುಷ-ಮಹಿಳೆಯರಿಗೆ ಸಮಾನ ಕೂಲಿ, ಯೋಜನೆಯ ಮೂಲ ಉದ್ದೇಶಗಳಾದ ಜಲ ಸಂರಕ್ಷಣೆ, ನೀರಾವರಿ, ಅಂತರ್ಜಲ ಮರುಪೂರಣ, ಜಲಾನಯನ ಪ್ರದೇಶದ ಅಭಿವೃದ್ಧಿ, ಜಲಮೂಲಗಳ ಪುನಶ್ಚೇತನ ಪ್ರಮುಖ ಕಾರ್ಯಗಳಿಗೆ ವಿಶೇಷ ಆದ್ಯತೆ ನೀಡುತ್ತದೆ. ವಿಕಸಿತ ಗ್ರಾಮ ಪಂಚಾಯತಿಯಿಂದ ವಿಕಸಿತ ಭಾರತದೆಡೆಗೆ ಯೋಜನೆಯ ಉದ್ದೇಶ ಈಡೇರಿಸುವುದಾಗಿದೆ.



ಪ್ರಸಕ್ತದಲ್ಲಿ ಪ್ರತಿ ಮಾನವ ದಿನಕ್ಕೆ ಕೂಲಿ ಹಣ ರೂ.382/- ನಿಗದಿಪಡಿಸಲಾಗಿದ್ದು, ಎಲ್ಲರೂ ಅಳತೆಗೆ ತಕ್ಕಂತೆ ಕೂಲಿ ಕೆಲಸ ನಿರ್ವಹಿಸಿದರೆ ಕೂಲಿ ಹಣವನ್ನು ಅಳತೆಗೆ ಅನುಗುಣವಾಗಿ ಪಾವತಿಸಲಾಗುತ್ತದೆ. 318 ಕಾಮಗಾರಿಗಳಲ್ಲಿ ವೈಯಕ್ತಿಕ ಕಾಮಗಾರಿಗಳಾದ ಜಾನುವಾರು ಶೆಡ್, ಮೇಕೆಶೆಡ್, ಕೃಷಿಹೊಂಡ, ಬದು ನಿರ್ಮಾಣ, ಕೋಳಿ ಶೆಡ್ ಇತ್ಯಾದಿ ಕಾಮಗಾರಿಗಳನ್ನು ಮಾಡಿಕೊಳ್ಳಲು ಅವಕಾಶವಿದೆ. ಜಮೀನು ಇರದಿದ್ದಲ್ಲಿ ಗ್ರಾಮ ಪಂಚಾಯತಿಯಿಂದ ನೀಡುವ ಸಾಮೂಹಿಕ ಕಾಮಗಾರಿಗಳಲ್ಲಿ ಕೂಲಿ ಕೆಲಸ ನಿರ್ವಹಿಸಿ ಕೂಲಿ ಹಣ ಪಡೆದು ಆರ್ಥಿಕವಾಗಿ ಸಬಲರಾಗಬೇಕು. ಹೊಸದಾಗಿ ನೋಂದಣಿಯಾದ ಕುಟುಂಬಗಳಿಗೆ ಗ್ಯಾರಂಟಿ ಕಾರ್ಡ್ಗಳನ್ನುವಿತರಿಸಲಾಗುತ್ತದೆ ಎಂದು ಅವರು ಯೋಜನೆಯ ಮಾಹಿತಿ ನೀಡಿದರು.

ತಾಲೂಕ ಐಇಸಿ ಸಂಯೋಜಕ ದೇವರಾಜ ಪತ್ತಾರ ಮಾತನಾಡಿ, ಪ್ರಸ್ತುತ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಜಾಬ್‌ಕಾರ್ಡ್ ಮೇಳ ಜರುಗುತ್ತಿದ್ದು, ಇಲ್ಲಿಯವರೆಗೆ ವಿಬಿಜಿ ರಾಮ್ ಜೀ ಯೋಜನೆಯಡಿ ನೋಂದಣಿಯಾಗದೇ ಉಳಿದುಕೊಂಡಿರುವ ಕುಟುಂಬಗಳಿಗೆ ಜಾಬ್‌ಕಾರ್ಡ್ ಪಡೆಯಲು ಆಧಾರ್ ಕಾರ್ಡ್, ಬ್ಯಾಂಕ್ ಖಾತೆ ಪ್ರತಿ, ಇಕೆವೈಸಿ ಪೂರೈಸಿ ಗ್ರಾಮೀಣ ರೋಜಗಾರ್ ಗ್ಯಾರಂಟಿ ಕಾರ್ಡ್ಗಳನ್ನು ಪಡೆಯಬಹುದಾಗಿದೆ ಎಂದರು. ಈ ಸಂದರ್ಭದಲ್ಲಿ ತಾಂತ್ರಿಕ ಸಂಯೋಜಕ ಯಮನೂರ, ತಾಂತ್ರಿಕ ಸಹಾಯಕ ಗುರುಲಿಂಗಪ್ಪ, ಗ್ರಾಮ ಕಾಯಕ ಮಿತ್ರ ಯಮುನಾ, ಕಾಯಕ ಬಂಧುಗಳು, ಕೂಲಿಕಾರರು ಹಾಜರಿದ್ದರು.

## ಸೆಪ್ಟಂಬರ್ 11ರಂದು ಉದ್ಯಮಶೀಲತಾ ಅಭಿವೃದ್ಧಿ ತರಬೇತಿ ಕಾರ್ಯಕ್ರಮ

ಧೃತಿ ನ್ಯೂಸ್ ಸುದ್ದಿ

ರಾಯಚೂರು: ಕರ್ನಾಟಕ ಸರ್ಕಾರದ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಹಾಗೂ ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ (ಸಿಡಾಕ್), ರಾಯಚೂರು ಜಿಲ್ಲೆ ಇವರ ಸಂಯುಕ್ತಾಶ್ರಯದಲ್ಲಿ ಸ್ವಂತ ಉದ್ಯೋಗವನ್ನು ಸ್ಥಾಪಿಸಲು ಇಚ್ಛಿಸಿದ ಎಲ್ಲಾ ವರ್ಗದ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳಿಗೆ 10 ದಿನಗಳ ಉದ್ಯಮಶೀಲತಾ ಅಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಸೆಪ್ಟಂಬರ್ 11ರಂದು ಸಿಂಧನೂರಿನಲ್ಲಿ ಹಮ್ಮಿಕೊಳ್ಳಲಾಗುವುದು.

ತರಬೇತಿಯಲ್ಲಿ ಸ್ವಂತ ಉದ್ಯಮವನ್ನು ಸ್ಥಾಪಿಸಲು ಅನುಸರಿಸಬೇಕಾದ ಕ್ರಮಗಳು, ಉದ್ಯಮಶೀಲತೆಯ ಗುಣಲಕ್ಷಣಗಳು ಸ್ವಂತ ಉದ್ಯೋಗ ಸ್ಥಾಪಿಸಲು ಸರ್ಕಾರದ ಯೋಜನೆಗಳು, ಬ್ಯಾಂಕಿನ ವ್ಯವಹಾರ ಮತ್ತು ಸಾಲ ಸೌಲಭ್ಯಗಳ ಮಾಹಿತಿ ಹಾಗೂ ಸ್ವಯಂ ಉದ್ಯಮಗಳನ್ನು ಸ್ಥಾಪಿಸಲು ಇತ್ಯಾದಿ ವಿಷಯಗಳ ಕುರಿತು ಮಾಹಿತಿಯನ್ನು ನೀಡಲಾಗುವುದು. ರಾಯಚೂರು ಜಿಲ್ಲೆಯ ಆಸಕ್ತ ಎಲ್ಲಾ ವರ್ಗದ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು 18 ವರ್ಷ ದಿಂದ 45 ವರ್ಷ ವಯಸ್ಸಿನವರಾಗಿರಬೇಕು. 8ನೇ ತರಗತಿ ಯಿಂದ ಎಸ್.ಎಸ್.ಎಲ್.ಸಿ ವರಗೆ ಶಿಕ್ಷಣ ಪಡೆದಿರಬೇಕು. ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಆಸಕ್ತರಿರುವವರು ದಿನಾಂಕ: 05-09-2026 ರೊಳಗಾಗಿ ಮೊಬೈಲ್ ಸಂಖ್ಯೆ: 9986600631ಗೆ ಸಂಪರ್ಕಿಸಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕು. ಅಥವಾ ಸಲಹೆಗಾರರು, ಸಿಡಾಕ್, ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿಗಳ ಕಚೇರಿ ನವೀನ ಆಸ್ಪತ್ರೆ ಪಕ್ಕದಲ್ಲಿ ರಾಯಚೂರು ಇಲ್ಲಿಗೆ ಬಂದು ಅರ್ಜಿ ಸಲ್ಲಿಸಬಹುದಾಗಿದೆ ಎಂದು ಸಿಡಾಕ್ ಸಲಹೆಗಾರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ನಮ್ಮ ಧೃತಿ ನ್ಯೂಸ್

ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

ಮೊ: 7353595904

# ಹಾವು ಕಡಿತ ಸಾವು ತಡೆಗೆ ಕಟ್ಟುನಿಟ್ಟಿನ ಕ್ರಮಕ್ಕೆ ಜಿಲ್ಲಾಧಿಕಾರಿಗಳ ಸೂಚನೆ

ಧೃತಿ ನ್ಯೂಸ್ ಸುದ್ದಿ

ಕೊಪ್ಪಳ: ಜಿಲ್ಲೆಯಲ್ಲಿ ಹಾವು ಕಡಿತದಿಂದ ಸಂಭವಿಸುತ್ತಿರುವ ಸಾವುಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ರಾಷ್ಟ್ರೀಯ ಹಾವು ಕಡಿತ ತಡೆಗಟ್ಟುವಿಕೆ ಹಾಗೂ ನಿಯಂತ್ರಣ ಕಾರ್ಯಕ್ರಮದ (ಎನ್.ಎಸ್.ಇ.ಪಿ) ಅಡಿಯಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮಂಗಳವಾರ (ಆ. 25ರಂದು) ಹಾವು ಕಡಿತದಿಂದ ಸಂಭವಿಸಿದ ಮರಣಗಳ ಆಡಿಟ್ ಸಭೆ ನಡೆಯಿತು.

ಜಿಲ್ಲಾಧಿಕಾರಿಗಳಾದ ಡಾ. ಸುರೇಶ ಬಿ. ಇಟ್ನಾಳ್ ಅವರು ಸಭೆಯ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿ, ಪ್ರಸ್ತುತ ಮಳೆಗಾಲವಾಗಿರುವುದರಿಂದ ಹಾಗೂ ರೈತರು ಕೃಷಿ ಚಟುವಟಿಕೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ತೊಡಗಿಸಿಕೊಂಡಿರುತ್ತಾರೆ. ಈ ಅವಧಿಯಲ್ಲಿ ಹಾವುಗಳ ಓಡಾಟವು ಸಹ ಹೆಚ್ಚಿರುತ್ತದೆ. ಹಾಗಾಗಿ ಗ್ರಾಮೀಣ ಪ್ರದೇಶಗಳಲ್ಲಿ ಹಾವು ಕಡಿತದ ಕುರಿತು ವ್ಯಾಪಕ ಜಾಗೃತಿ ಮೂಡಿಸಬೇಕು. ಇದಲ್ಲದೇ ರಾತ್ರಿ ವೇಳೆ ಹೊರಗೆ ಹೋಗುವಾಗ ಟಾರ್ಚ್ ಬಳಸುವುದು, ಕೃಷಿ ಜಮೀನು ಮತ್ತು ಪೊದೆ ಪ್ರದೇಶಗಳಲ್ಲಿ ಎಚ್ಚರಿಕೆಯಿಂದ ಸಂಚರಿಸುವುದು ಹಾಗೂ ಸೂಕ್ತ ಪಾದರಕ್ಷೆ ಮತ್ತು ರಕ್ಷಣಾತ್ಮಕ ಉಡುಪುಗಳನ್ನು ಬಳಸುವಂತೆ ರೈತರಿಗೆ ಮತ್ತು ಸಾರ್ವಜನಿಕರಿಗೆ ಜಾಗೃತಿ ಮೂಡಿಸಬೇಕೆಂದರು. ಹಾವು ಕಡಿತವನ್ನು



ತುರ್ತು ವೈದ್ಯಕೀಯ ಪರಿಸ್ಥಿತಿಯೆಂದು ಪರಿಗಣಿಸಿ, ಸಕಾಲದಲ್ಲಿ ಚಿಕಿತ್ಸೆ ನೀಡಬೇಕು. ಅಗತ್ಯವಿದ್ದಲ್ಲಿ ರೋಗಿಯನ್ನು ಮೇಲ್ದರ್ಜೆಯ ಆಸ್ಪತ್ರೆಗೆ ತಕ್ಷಣ ರೆಫರ್ ಮಾಡುವ ಮೂಲಕ ಸೂಕ್ತ ಚಿಕಿತ್ಸೆ ಒದಗಿಸಬೇಕು. ಎಲ್ಲಾ ಸರ್ಕಾರಿ ಆರೋಗ್ಯ ಸಂಸ್ಥೆಗಳ ವೈದ್ಯಾಧಿಕಾರಿಗಳು ತಮ್ಮ ಸಂಸ್ಥೆಗಳಲ್ಲಿ ಆ?ಯಂಟಿ-ಸ್ನೇಕ್ ವೆನಮ್ (ಎ.ಎಸ್.ವಿ) ಸಮರ್ಪಕ ಪ್ರಮಾಣದಲ್ಲಿ ದಾಸ್ತಾನು ಇರುವುದನ್ನು ಖಚಿತಪಡಿಸಿಕೊಳ್ಳಬೇಕು. ಹಾವು ಕಡಿತದ ಪ್ರಕರಣ ಆರೋಗ್ಯ ಸಂಸ್ಥೆಗೆ ಬಂದ ಕೂಡಲೇ ರೋಗಿಯ ವಿಷದ ಪರಿಣಾಮ, ಕ್ಲಿನಿಕಲ್ ಲಕ್ಷಣಗಳು ಹಾಗೂ ಆರೋಗ್ಯ ಸ್ಥಿತಿಯನ್ನು ಮೌಲ್ಯಮಾಪನ ಮಾಡಿ, ಜಾರಿಯಲ್ಲಿರುವ ಚಿಕಿತ್ಸಾ ಮಾರ್ಗಸೂಚಿಗಳಂತೆ ಅಗತ್ಯವಿದ್ದಲ್ಲಿ ಯಾವುದೇ ವಿಳಂಬವಿಲ್ಲದೆ ಸೂಕ್ತ ಚಿಕಿತ್ಸೆಯನ್ನು ಆರಂಭಿಸಬೇಕು. ಆ?ಯಂಟಿ-ಸ್ನೇಕ್ ವೆನಮ್‌ನ ಸಮರ್ಪಕ ಲಭ್ಯತೆ, ಸರಿಯಾದ ಸಂಗ್ರಹಣೆ ಹಾಗೂ ಅಗತ್ಯವಿದ್ದಾಗ ತಕ್ಷಣ ಚಿಕಿತ್ಸೆ ನೀಡುವ ವ್ಯವಸ್ಥೆಯನ್ನು ಪ್ರತಿಯೊಂದು ಆರೋಗ್ಯ ಸಂಸ್ಥೆಯಲ್ಲೂ ಕಡ್ಡಾಯವಾಗಿ ಖಚಿತಪಡಿಸಿಕೊಳ್ಳಬೇಕು. ಹಾವು ಕಡಿತ ಸಾವು ತಡೆಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಸಂಬಂಧಿಸಿದ ವೈದ್ಯಾಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.

ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ನಂದಕುಮಾರ ಅವರು ಮಾತನಾಡಿ, ಹಾವು ಕಡಿತ ಪ್ರಕರಣಗಳು ಹಾಗೂ ಹಾವು ಕಡಿತದಿಂದ ಸಂಭವಿಸುವ ಸಾವುಗಳನ್ನು ಅಧಿಸೂಚಿತ ರೋಗವೆಂದು ಘೋಷಿಸಿದ ದೇಶದ ಮೊದಲ ರಾಜ್ಯ ಕರ್ನಾಟಕವಾಗಿದೆ. ಕರ್ನಾಟಕ ಸರ್ಕಾರವು 2024ರ ಫೆಬ್ರವರಿ 12ರಂದು ಹೊರಡಿಸಿದ ಅಧಿಕೃತ ಅಧಿಸೂಚನೆಯ ಮೂಲಕ ಹಾವು ಕಡಿತ ಪ್ರಕರಣಗಳು ಮತ್ತು ಮರಣಗಳನ್ನು ಅಧಿಸೂಚಿತ ರೋಗಗಳ ಪಟ್ಟಿಗೆ ಸೇರಿಸಿದೆ ಎಂದು ಮಾಹಿತಿ ನೀಡಿದರು.

**ಪ್ರಕರಣಗಳ ವಿಶ್ಲೇಷಣೆ:**

ಕೊಪ್ಪಳ ಜಿಲ್ಲೆಯಲ್ಲಿ ಪ್ರಸಕ್ತ ವರ್ಷ ಇದುವರೆಗೆ ಹಾವು ಕಡಿತದಿಂದ 10 ಮಂದಿ ಮೃತಪಟ್ಟಿದ್ದು, ಸಭೆಯಲ್ಲಿ ಈ ಪೈಕಿ 5 ಮರಣ ಪ್ರಕರಣಗಳನ್ನು ವಿವರವಾಗಿ ಪರಿಶೀಲಿಸಲಾಯಿತು. ಪ್ರತಿ ಪ್ರಕರಣದಲ್ಲಿ ಹಾವು ಕಡಿದ ಸಮಯ, ನಂತರ ಕಂಡುಬಂದ ಲಕ್ಷಣಗಳು, ರೋಗಿಯ ಆರೋಗ್ಯ ಸ್ಥಿತಿ, ಆಸ್ಪತ್ರೆಗೆ ತೆರಳಲು ತೆಗೆದುಕೊಂಡ ಸಮಯ, ಚಿಕಿತ್ಸೆಯಲ್ಲಾದ ವಿಳಂಬ, ರೆಫರಲ್ ಪ್ರಕ್ರಿಯೆ, ಮೇಲ್ದರ್ಜೆಯ ಆಸ್ಪತ್ರೆಗೆ ರವಾನಿಸಿದ ಸಮಯ ಹಾಗೂ ನೀಡಲಾದ ಚಿಕಿತ್ಸಾ ಕ್ರಮಗಳನ್ನು ಪ್ರಕರಣವಾರು ವಿಶ್ಲೇಷಿಸಲಾಯಿತು. ಸಭೆಯಲ್ಲಿ ಕೊಪ್ಪಳ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಈಶ್ವರ ಸವಡಿ, ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳಾದ ಡಾ. ಪ್ರಕಾಶ ವಿ., ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ಡಾ. ರವೀಂದ್ರನಾಥ ಎಂ.ಎಚ್., ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿ ಡಾ.ಪ್ರಕಾಶ ಎಚ್., ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ. ಗೋನಾಳ ಕುಮಾರಸ್ವಾಮಿ, ಜಿಲ್ಲಾ ಆಯುಷ್ ಅಧಿಕಾರಿ ಡಾ. ಪರ್ವತಗೌಡ ಹಿರೇಗೌಡ್ರ ಹಾಗೂ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು, ವಿವಿಧ ತಾಲ್ಲೂಕುಗಳ ಆರೋಗ್ಯಾಧಿಕಾರಿಗಳು, ಕೊಪ್ಪಳ ಕಿಮ್ಸ್ ತಜ್ಞ ವೈದ್ಯರು, ವಿವಿಧ ಆರೋಗ್ಯ ಸಂಸ್ಥೆಗಳ ವೈದ್ಯಾಧಿಕಾರಿಗಳು ಹಾಗೂ ಆರೋಗ್ಯ ಇಲಾಖೆಯ ಇತರೆ ಅಧಿಕಾರಿಗಳು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

# ರಜಾದಿನವೂ ಬೆಸ್ಕಾಂ ಸ್ವಚ್ಛತಾ ಕಾರ್ಯ, ಶೇ.80ರಷ್ಟು ತೆರವು ಪೂರ್ಣ



ಬೆಂಗಳೂರು: ನಗರದ ಪಾದಚಾರಿ ಮಾರ್ಗಗಳಲ್ಲಿ ಸ್ಥಗಿತಗೊಂಡಿರುವ ಹಾಗೂ ಬಳಕೆಯಲ್ಲಿಲ್ಲದ ವಿದ್ಯುತ್ ಪರಿಕರಗಳನ್ನು ತೆರವುಗೊಳಿಸುವ ಜತೆಗೆ ಸ್ವಚ್ಛತಾ ಕಾರ್ಯವನ್ನು ಬೆಸ್ಕಾಂ ಭಾನುವಾರವೂ ಮುಂದುವರಿಸಿತು. ಕ್ಲೀನ್ ಅಪ್ ಬೆಂಗಳೂರು ಅಭಿಯಾನದ ಭಾಗವಾಗಿ ನಗರದ ವಿವಿಧೆಡೆ ಬೆಸ್ಕಾಂ ಅಧಿಕಾರಿಗಳು ಹಾಗೂ ಸಿಬ್ಬಂದಿ ದಿನವಿಡೀ ಕಾರ್ಯಾಚರಣೆ ನಡೆಸಿದರು.

ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಡಾ. ಎನ್. ಶಿವಶಂಕರ ಅವರ ನೇತೃತ್ವದಲ್ಲಿ ಶನಿವಾರ ತಡರಾತ್ರಿಯಿಂದ ಆರಂಭಗೊಂಡಿದ್ದ ಕಾರ್ಯಾಚರಣೆ ಭಾನುವಾರ ಬೆಳಿಗ್ಗೆ 6ರಿಂದ ಮತ್ತೆ ಚುರುಕುಗೊಂಡಿತು. ಮಲ್ಲೇಶ್ವರ, ರಾಜಾಜಿನಗರ, ಹೆಬ್ಬಾಳ, ರಾಜರಾಜೇಶ್ವರಿ ನಗರ, ಕೆಎಚ್‌ಬಿ ಕಾಲೊನಿ ಮುಖ್ಯರಸ್ತೆ, ಕೋರಮಂಗಲ, ನಾಗವಾರ, ಬಂಗಾರಪ್ಪನಗರ, ಥಣಿಸಂದ್ರ, ಕೊತ್ತನೂರು, ಸುಂಕದಕಟ್ಟೆ, ನಾಗರಬಾವಿ, ಕೊಮಘಟ್ಟ, ಉತ್ತರಹಳ್ಳಿ, ಕತ್ರಿಗುಪ್ಪೆ, ವೈಟ್‌ಫೀಲ್ಡ್ ಹಾಗೂ ಮಹದೇವಪುರ ಸೇರಿದಂತೆ ಹಲವು ಪ್ರದೇಶಗಳಲ್ಲಿ ಅನುಪಯುಕ್ತ ವಿದ್ಯುತ್ ಪರಿಕರಗಳ ತೆರವು ಹಾಗೂ ಸ್ವಚ್ಛತಾ ಕಾರ್ಯ ನಡೆಯಿತು. ಜಿಒಎಸ್ ರಾಡ್‌ಗಳನ್ನು ನೆಲಮಟ್ಟದಿಂದ ಏಳು ಅಡಿ ಎತ್ತರಿಸುವ ಕಾರ್ಯವನ್ನೂ ಕೈಗೊಳ್ಳಲಾಯಿತು.

**ಶೇ.80ರಷ್ಟು ಕಾರ್ಯ ಪೂರ್ಣ**

ಕ್ಲೀನ್ ಅಪ್ ಬೆಂಗಳೂರು ಅಭಿಯಾನದಡಿ ಬೆಸ್ಕಾಂ ಕೈಗೊಂಡಿರುವ ತೆರವು ಹಾಗೂ ಸ್ವಚ್ಛತಾ ಕಾರ್ಯ ಶೇ.80ರಷ್ಟು ಪೂರ್ಣಗೊಂಡಿದೆ ಎಂದು ಡಾ. ಎನ್. ಶಿವಶಂಕರ ತಿಳಿಸಿದರು.ಪಾದಚಾರಿ ಮಾರ್ಗಗಳಲ್ಲಿದ್ದ ಸ್ಥಗಿತಗೊಂಡ ಅಥ–'ವಾ ಬಳಕೆಯಲ್ಲಿಲ್ಲದ ವಿದ್ಯುತ್ ಪರಿವರ್ತಕ ಕೇಂದ್ರಗಳು ಸೇರಿದಂತೆ ಇತರೆ ಅನುಪಯುಕ್ತ ಪರಿಕರಗಳ ತೆರವು ಕಾರ್ಯವನ್ನು ಬೆಸ್ಕಾಂ ಮೂರು ತಿಂಗಳ ಹಿಂದೆಯೇ ಆರಂಭಿಸಿತ್ತು. ಆಗಸ್ಟ್ 1ರಿಂದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ನೇತೃತ್ವ ಹಾಗೂ ಇಂಧನ ಸಚಿವರು ಮತ್ತು ಬೆಂಗಳೂರು ನಗರಾಭಿವೃದ್ಧಿ ಸಚಿವರ ಮಾರ್ಗದರ್ಶನದಲ್ಲಿ ಇದನ್ನು ಆಂದೋಲನದ ರೂಪದಲ್ಲಿ ಕೈಗೊಳ್ಳಲಾಗಿದೆ ಎಂದು ಅವರು ಹೇಳಿದರು. ಮುಂದಿನ ದಿನಗಳಲ್ಲಿ ಲೈನ್‌ಮನ್‌ಗಳು ಪ್ರತಿ ವಾರ ಅಥವಾ 15 ದಿನಕ್ಕೊಮ್ಮೆ ಪರಿವರ್ತಕಗಳ ಸುತ್ತಮುತ್ತಲಿನ ಪ್ರದೇಶವನ್ನು ಸ್ವಚ್ಛಗೊಳಿಸಲಿದ್ದಾರೆ ಎಂದರು.ಆ. 1ರಿಂದ 23ರವರೆಗೆ ಬೆಸ್ಕಾಂ ಕೈಗೊಂಡ ಕಾರ್ಯಾಚರಣೆಯಲ್ಲಿ 1,535 ವಿದ್ಯುತ್ ಕಂಬಗಳು, ಆರು ಟ್ರಾನ್ಸ್‌ಫಾರ್ಮರ್ ಕೇಂದ್ರಗಳು ಹಾಗೂ ಒಂಬತ್ತು ಇತರೆ ಅನುಪಯುಕ್ತ ಮೂಲಸೌಕರ್ಯಗಳನ್ನು ತೆರವುಗೊಳಿಸಲಾಗಿದೆ. 1,758 ಜಿಎಸ್ ಆಪರೇಟಿಂಗ್ ರಾಡ್‌ಗಳನ್ನು ಮಾರ್ಪಡಿಸಲಾಗಿದೆ. ಇದರೊಂದಿಗೆ 4,836 ಡಿಟಿಸಿ ಯಾರ್ಡ್‌ಗಳು, 1,368 ಆರ್‌ಎಂಎ–ಯು ಯಾರ್ಡ್‌ಗಳು ಹಾಗೂ 1,207 ಸ್ಪನ್ ಪೋಲ್/ಡಿಪಿ ಯಾರ್ಡ್‌ಗಳ ಸ್ವಚ್ಛತಾ ಕಾರ್ಯ ಕೈಗೊಳ್ಳಲಾಗಿದೆ. 151 ಫೀಡರ್ ಪಿಲ್ಲರ್ ಬಾಕ್ಸ್‌ಗಳ ರಿವೈರಿಂಗ್ ಮತ್ತು ಯಾರ್ಡ್ ಸ್ವಚ್ಛತಾ ಕಾಮಗಾರಿ ಹಾಗೂ 401 ಕಂಬಗಳ ರಿವೈರಿಂಗ್ ಮತ್ತು ಯಾರ್ಡ್ ಸ್ವಚ್ಛತಾ ಕಾಮಗಾರಿಯನ್ನೂ ನಡೆಸಲಾಗಿದೆ. ಸ್ವಚ್ಛ ಮತ್ತು ಸುರಕ್ಷಿತ ಬೆಂಗಳೂರಿನ ಪರಿಕಲ್ಪನೆಯನ್ನು ಸಾಕಾರಗೊಳಿಸುವಲ್ಲಿ ಜಿಬಿಎಗೆ ಬೆಸ್ಕಾಂ ಎಲ್ಲ ರೀತಿಯ ಸಹಕಾರ ನೀಡುತ್ತಿದೆ. ರಜಾದಿನವೂ ಲೈನ್‌ಮನ್‌ಗಳು, ಅಧಿಕಾರಿಗಳು ಮತ್ತು ಸಿಬ್ಬಂದಿ ಅನುಪಯುಕ್ತ ಪರಿಕರಗಳ ತೆರವು ಹಾಗೂ ಸ್ವಚ್ಛತಾ ಕಾರ್ಯದಲ್ಲಿ ತೊಡಗಿಸಿಕೊಂಡಿರುವುದು ಶ್ಲಾಘನೀಯ ಎಂದು ಇಂಧನ ಹಾಗೂ ಪ್ರವಾಸೋದ್ಯಮ ಸಚಿವ ಕೆ.ಜೆ. ಜಾರ್ಜ್ ತಿಳಿಸಿದ್ದಾರೆ. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಘೋಷಿಸಿದ್ದ ಕ್ಲೀನ್ ಅಪ್ ಬೆಂಗಳೂರು ತಿಂಗಳ ಅಭಿಯಾನದ ಭಾಗವಾಗಿ ಆಗಸ್ಟ್ 1ರಂದು ಸಚಿವ ಕೆ.ಜೆ. ಜಾರ್ಜ್ ಅವರು ಅಭಿಯಾನಕ್ಕೆ ಚಾಲನೆ ನೀಡಿದ್ದರು.

# ಭಾರಿ ಬೆಲೆ ಏರಿಕೆಯಿಂದ ಕಹಿಯಾದ ಸಕ್ಕರೆ-ಬೆಲ್ಲ



ಬೆಂಗಳೂರು: ಸಕ್ಕರೆ ಬೆಲೆ ಏರಿಕೆ ಬೆನ್ನಲ್ಲೇ ಇದೀಗ ಬೆಲ್ಲದ ಬೆಲೆಯೂ ದಾಖಲೆಯ ಮಟ್ಟಕ್ಕೆ ಏರಿಕೆಯಾಗಿದೆ. ಮಂಡ್ಯ ಎಪಿಎಂಸಿಯಲ್ಲಿ ಗುಣಮಟ್ಟದ ಅಚ್ಚುಬೆಲ್ಲ ಕ್ವಿಂಟಾಲ್‌ಗೆ ಗರಿಷ್ಠ 6,750 ರೂ.ಗಳಿಂದ 7 ಸಾವಿರ ರೂ.ವರೆಗೆ ಮಾರಾಟವಾಗುತ್ತಿದೆ.ಕಳೆದ ಕೆಲವು ದಿನಗಳಿಂದ ಸಕ್ಕರೆ ಬೆಲೆ ನಿರಂತರವಾಗಿ ಏರುತ್ತಲೇ ಇದ್ದು, ಚಿಲ್ಲರೆಯಾಗಿ ಕೆಜಿ ಸಕ್ಕರೆ 70 ರೂ.ಗೆ ಮಾರಾಟವಾಗುತ್ತಿದೆ. ಸಿಹಿಯಾದ ಸಕ್ಕರೆ ಗ್ರಾಹಕರಿಗೆ ಬೆಲೆ ಕೇಳುತ್ತಿದ್ದಂತೆ ಕಹಿಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಈಗಾಗಲೇ ಕೆಲವೆಡೆ ಟೀ, ಕಾಫಿ ಹಾಗೂ ಸಿಹಿತಿನಿಸುಗಳ ಬೆಲೆಯೂ ಏರಿಕೆಯಾಗಿದೆ. ಕಳೆದ 2–3 ದಿನಗಳಿಂದ ಮಳೆಯಾಗುತ್ತಿದ್ದು, ಮೋಡ ಕವಿದ ವಾತಾವರಣ ಇರುವುದರಿಂದ ಚುಮುಚುಮು ಚಳಿಗೆ ಟೀ, ಕಾಫಿ ಕುಡಿಯಲು ಹೋಟೆಲ್‌ಗೆ ಹೋದರೆ ಬೆಲೆ ನೋಡಿ ಶಾಕ್ ಆಗುವಂತಾಗಿದೆ. ಇತ್ತ ಬೆಲ್ಲದ ಚಹಾ ಕುಡಿಯೋಣ ಎಂದರೂ ಅದರ ಬೆಲೆಯೂ ಏರಿಕೆಯಾಗಿದೆ. ಮಂಡ್ಯ ಎಪಿಎಂಸಿಯಲ್ಲಿ ಈ ಹಿಂದೆ ಕ್ವಿಂಟಾಲ್ ಬೆಲ್ಲಕ್ಕೆ 4,700 ರೂ.ಗಳಿಂದ 5 ಸಾವಿರ ರೂ.ವರೆಗೆ ದರವಿತ್ತು. ಇದೀಗ ಸುಮಾರು 2 ಸಾವಿರ ರೂ. ಹೆಚ್ಚಾಗಿದ್ದು, ಒಂದೇ ಬಾರಿ ಇಷ್ಟು ಬೆಲೆ ಹೆಚ್ಚಾಗಿರುವುದು ಐತಿಹಾಸಿಕ ದಾಖಲೆ ಎಂದು ಮಾರಾಟಗಾರರು ತಿಳಿಸಿದ್ದಾರೆ.

**ಆಲೆಮನೆಗಳು ಕಣ್ಮರೆ:** ಇತ್ತೀಚಿನ ದಿನಗಳಲ್ಲಿ ಕೂಲಿಕಾರ್ಮಿಕರ ಕೊರತೆಯಿಂದಾಗಿ ಮಂಡ್ಯ, ಮೈಸೂರು, ಮಳವಳ್ಳಿ, ಮದ್ದೂರು ಸೇರಿದಂತೆ ಮತ್ತಿತರ ಕಡೆಗಳಲ್ಲಿ ನಡೆಯುತ್ತಿದ್ದ ಆಲೆಮನೆಗಳು ಮುಚ್ಚಿವೆ. ಇದರಿಂದ ಬೆಲ್ಲದ ಉತ್ಪಾದನೆ ಕುಂಠಿತವಾಗಿದೆ. ಶ್ರಾವಣ ಮಾಸ ಆರಂಭವಾಗಿದ್ದು, ಸಾಲುಸಾಲು ಹಬ್ಬಗಳು ಹಾಗೂ ಶುಭ ಸಮಾರಂಭಗಳು ಹೆಚ್ಚಾಗಿ ನಡೆಯುತ್ತಿದ್ದು, ಬೆಲ್ಲಕ್ಕೆ ಬೇಡಿಕೆ ಹೆಚ್ಚಾಗಿರುವುದೂ ಬೆಲೆ ಏರಿಕೆಗೆ ಕಾರಣವಾಗಿದೆ.ಮಾರುಕಟ್ಟೆಯಲ್ಲಿ ಸಕ್ಕರೆ ದರ ಕೆಜಿಗೆ 70 ರೂ. ಆಗಿರುವುದು ಬೆಲ್ಲದ ಉತ್ಪಾದನೆ ಮೇಲೂ ಪರಿಣಾಮ ಬೀರಿದೆ. ಮಂಡ್ಯದಿಂದ ಪ್ರತಿನಿತ್ಯ ಟನ್‌ಗಟ್ಟಲೆ ಬೆಲ್ಲ ಹೊರರಾಜ್ಯಗಳಿಗೆ ಸರಬರಾಜಾಗುತ್ತಿತ್ತು. ಕಳೆದ ಮೂರ್ನಾಲ್ಕು ದಿನಗಳಿಂದ ಆ ಪ್ರಮಾಣ ಗಣನೀಯವಾಗಿ ಕಡಿಮೆಯಾಗಿದೆ ಎಂದು ವರ್ತಕರು ತಿಳಿಸಿದ್ದಾರೆ.ಕಳೆದ ಹತ್ತು ವರ್ಷಗಳಿಗೆ ಹೋಲಿಸಿದರೆ ಇದೇ ಮೊದಲ ಬಾರಿಗೆ ಒಂದೇ ಬಾರಿಗೆ ಕೆಜಿಗೆ 20ರಿಂದ 25 ರೂ. ವರೆಗೆ ಏರಿಕೆ ಕಂಡಿದೆ. ಕಳೆದ ವಾರ ಕೆಜಿ ಬೆಲ್ಲ 45ರಿಂದ 50 ರೂ.ಗೆ ಮಾರಾಟವಾಗುತ್ತಿತ್ತು. ಇದೀಗ 68 ರೂ.ಗೆ ಮಾರಾಟವಾಗುತ್ತಿದೆ. ಎಪಿಎಂಸಿ ಮಾರುಕಟ್ಟೆಯಲ್ಲಿ ಉಂಡೆಬೆಲ್ಲಕ್ಕಿಂತ ಅಚ್ಚುಬೆಲ್ಲಕ್ಕೆ ಬೇಡಿಕೆ ಹೆಚ್ಚಾಗಿದೆ. ಕ್ವಿಂಟಾಲ್‌ಗೆ 4,500 ರೂ.ಗಳಿಂದ 6,300 ರೂ.ವರೆಗೆ ಮಾರಾಟವಾಗಿದೆ.ಒಟ್ಟಿನಲ್ಲಿ ಸಿಹಿ ನೀಡುವ ಬೆಲ್ಲ ಮತ್ತು ಸಕ್ಕರೆ ಎರಡರ ಬೆಲೆಯೂ ಏರಿಕೆಯಾಗುವ ಮೂಲಕ ಗ್ರಾಹಕರಿಗೆ ಕಹಿಯಾಗಿದೆ. ರಾಜ್ಯದಲ್ಲಿ ಇತ್ತೀಚೆಗೆ ಸಕ್ಕರೆ ಕಾಯಿಲೆ ಹೆಚ್ಚಾಗುತ್ತಿದ್ದು, ಬಹುತೇಕ ಜನರು ಸಕ್ಕರೆ ರಹಿತ ಕಾಫಿ, ಟೀ ಕುಡಿಯುತ್ತಿದ್ದಾರೆ. ಇದರಿಂದ ತುಸು ಬೇಡಿಕೆ ಕಡಿಮೆಯಾಗಿದೆ. ಎಲ್ಲರೂ ಸಕ್ಕರೆ, ಬೆಲ್ಲ ಬಳಸುವಂತಿದ್ದರೆ ಇನ್ನೂ ಬೆಲೆ ಏರಿಕೆಯಾಗುತ್ತಿತ್ತು ಎಂದು ಹಿರಿಯ ನಾಗರಿಕರೊಬ್ಬರು ತಮ್ಮ ಅಭಿಪ್ರಾಯ ಹಂಚಿಕೊಂಡಿದ್ದಾರೆ.

# 24,315 ಬಿಪಿಎಲ್ ಕಾರ್ಡ್ ಫಲಾನುಭವಿಗಳು ಸಂದೇಹಾಸ್ಪದ : ಜಿ.ಪರಮೇಶ್ವರ್

ಬೆಂಗಳೂರು:ರಾಜ್ಯದಲ್ಲಿ 24,315 ಬಿಪಿಎಲ್ ಕಾರ್ಡ್ ಫಲಾನುಭವಿಗಳನ್ನು ಸಂದೇಹಾಸ್ಪದ ಎಂದು ಗುರುತಿಸಲಾಗಿದೆ ಎಂದು ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್ ತಿಳಿಸಿದ್ದಾರೆ.ವಿಧಾನಸಭೆಯ ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿ ಶಾಸಕರು ಸಭಾಧ್ಯಕ್ಷರ ಪೀಠದ ಮುಂದಿನ ಬಾವಿಗಿಳಿದು ಧರಣಿ ನಡೆಸಿದ ಹಿನ್ನೆಲೆಯಲ್ಲಿ ವಿರೋಧ ಪಕ್ಷದ ಶಾಸಕರು ಪ್ರಶ್ನೋತ್ತರ ಕಲಾಪದಲ್ಲಿ ಭಾಗವಹಿಸಲಿಲ್ಲ. ಆದರೂ ಸಂಬಂಧಿಸಿದ ಪ್ರಶ್ನೆಗಳಿಗೆ ಸರ್ಕಾರದ ಪರವಾಗಿ ಉತ್ತರಗಳನ್ನು ಮಂಡಿಸಲಾಯಿತು.


ರಾಜಾಜಿನಗರ ಶಾಸಕ ಎಸ್. ಸುರೇಶ್ ಕುಮಾರ್ ಅವರ ಪ್ರಶ್ನೆಗೆ ಉತ್ತ–ರಿಸಿದ ಉಪಮುಖ್ಯಮಂತ್ರಿಯವರು, 2026ರ ಜುಲೈ ವೇಳೆಗೆ 5,607 ಫಲಾನುಭವಿಗಳಿಗೆ ಮಾಸಿಕ ಪಿಂಚಣಿ ಪಾವತಿಸಲಾಗಿದೆ ಎಂದು ವಿವರಿಸಿದರು. ಕುಟುಂಬದ ಆದಾಯದ ಮಿತಿಯನ್ನು 32 ಸಾವಿರ ರೂ.ಗೆ ಹೆಚ್ಚಿಸುವ ಪ್ರಸ್ತಾವನೆ ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿದೆ ಎಂದು ತಿಳಿಸಿದರು.

ಸಂದೇಹಾಸ್ಪದ ಪ್ರಕರಣಗಳ ಕು–ರಿತು ಗ್ರಾಮ ಲೆಕ್ಕಾಧಿಕಾರಿ ಹಂತದಲ್ಲಿ 23,671 ಪ್ರಕರಣಗಳಲ್ಲಿ ಕ್ರಮ ಕೈಗೊಳ್ಳಲಾಗಿದೆ. ಈ ಪೈಕಿ 3,240 ಪ್ರಕರಣಗಳನ್ನು ಮುಂದುವ–ರಿಸಲಾಗಿದ್ದು, 20,431 ಪ್ರಕರಣಗಳಲ್ಲಿ ಸೇವೆ ಸ್ಥಗಿತಗೊಳಿಸಲಾಗಿದೆ. ಅಲ್ಲದೆ, 3,816 ಪ್ರಕರಣಗಳಲ್ಲಿ ಫಲಾನುಭವಿಗಳು ಲಭ್ಯವಿಲ್ಲ ಎಂದು ತಿಳಿಸಿದರು. ಇನ್ನು 14,493 ಫಲಾನುಭವಿಗಳು ಅಗತ್ಯ ದಾಖಲೆಗಳನ್ನು ಸಲ್ಲಿಸಲು ಸಿದ್ಧ–ರಿಲ್ಲ. 595 ಫಲಾನುಭವಿಗಳು ಆದಾಯ ಪ್ರಮಾಣಪತ್ರವನ್ನು ಒದಗಿಸಿಲ್ಲ ಎಂದು ವಿವರಿಸಿದರು. ತಹಸೀಲ್ದಾರ್ ಹಂತದಲ್ಲಿ 2,367 ಪ್ರಕರಣಗಳನ್ನು ಮುಂದುವ–ರಿಸಲಾಗಿದ್ದು, 325 ಪ್ರಕರಣಗಳಲ್ಲಿ ಸೌಲಭ್ಯವನ್ನು ರದ್ದುಗೊಳಿಸಲಾಗಿದೆ. ಒಟ್ಟು 21,623 ಅರ್ಜಿಗಳು ಬಾಕಿ ಉಳಿದಿವೆ ಎಂದು ಉಪಮುಖ್ಯಮಂತ್ರಿ ಮಾಹಿತಿ ನೀಡಿದರು.



ಅರ್ಹತಾ ಮಾನದಂಡಗಳನ್ನು ಹೊಂದದೆ ಪಿಂಚಣಿ ಪಡೆಯುತ್ತಿರುವ ಫಲಾನುಭವಿಗಳ ಕುರಿತು ದೂರುಗಳು ಬಂದ ಹಿನ್ನೆಲೆಯಲ್ಲಿ, ಕುಟುಂಬ ದತ್ತಾಂಶದಿಂದ ಪಡೆದ ಮಾಹಿತಿಯ ಆದ–ಾರದ ಮೇಲೆ ಆದಾಯ ಮಿತಿ ಸೇರಿದಂತೆ ಇತರೆ ಅರ್ಹತಾ ಮಾನದಂಡಗಳನ್ನು ಪರಿಶೀಲಿಸಲಾಗುತ್ತಿದೆ ಎಂದು ಡಾ. ಜಿ. ಪರಮೇಶ್ವರ್ ತಿಳಿಸಿದರು.

# ಗೈಡ್ ಇಲ್ಲ, ದಾರಿ ಗೊತ್ತಿಲ್ಲ : ಎತ್ತಿನ ಭುಜ ಚಾರಣಿಗರ ಪರದಾಟ



ಚಿಕ್ಕಮಗಳೂರು: ಮೂಡಿಗೆರೆ ತಾಲೂಕಿನ ಪ್ರಸಿದ್ಧ ಎತ್ತಿನ ಭುಜ–ಕ್ಕೆ ಚಾರಣಕ್ಕೆ ಆಗಮಿಸಿದ್ದ ಪ್ರವಾಸಿಗರು ಮಾರ್ಗದರ್ಶಕರಿಲ್ಲದೆ ದಾರಿ ತಪ್ಪಿ ಅರ್ಧ ಹಾದಿಯಿಂದಲೇ ವಾಪಸ್ ಬಂದ ಘಟನೆ ನಡೆದಿದೆ.ವಾರಾಂತ್ಯದ ಹಿನ್ನೆಲೆಯಲ್ಲಿ ನೂರಾರು ಪ್ರವಾಸಿಗರು ಎತ್ತಿನ ಭುಜ ಚಾರಣಕ್ಕೆ ಆಗಮಿಸಿದ್ದರು. ಆನ್‌ಲೈನ್‌ನಲ್ಲಿ ಮುಂಗಡ ಬುಕ್ಕಿಂಗ್ ಮಾಡಿಕೊಂಡು ಬಂದಿದ್ದ ಪ್ರವಾಸಿಗರಿಗೆ ಸ್ಥಳದಲ್ಲಿ ಗೈಡ್‌ಗಳ ವ್ಯವಸ್ಥೆ ಇಲ್ಲದಿರುವುದು ಹಾಗೂ ಚಾರಣ ಮಾರ್ಗದಲ್ಲಿ ಬೃಹತ್ ಮರಗಳು ಬಿದ್ದಿರುವುದು ತೊಂದರೆ ಉಂಟುಮಾಡಿತು.

ಹಲವು ತಿಂಗಳಿನಿಂದ ಸ್ಥಗಿತಗೊಂಡಿದ್ದ ಚಾರಣವನ್ನು ಅರಣ್ಯ ಇಲಾಖೆ ಯಾವುದೇ ಪೂರ್ವಸಿದ್ಧತೆ ಇಲ್ಲದೆ ಪುನರಾರಂಭಿಸಿದೆ ಎಂಬ ಆರೋಪ ಕೇಳಿಬಂದಿದೆ. 5 ಕಿ.ಮೀ. ಚಾರಣಕ್ಕೆ 300 ರೂ. ಪ್ರವೇಶ ಶುಲ್ಕ ಹಾಗೂ ಗೈಡ್‌ಗೆ 75 ರೂ. ಶುಲ್ಕ ಪಡೆಯುತ್ತಿದ್ದರೂ, ಗೈಡ್‌ಗಳ ವ್ಯವಸ್ಥೆ ಮಾಡದಿರುವುದಕ್ಕೆ ಪ್ರವಾಸಿಗರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಬೆಂಗಳೂರಿನಿಂದ ಬಂದ ರಾಜೇಶ್ ಹಾಗೂ ಅವರ ತಂಡ ಆನ್‌ಲೈನ್‌ನಲ್ಲಿ ಬುಕ್ಕಿಂಗ್ ಮಾಡಿಕೊಂಡು ಚಾರಣಕ್ಕೆ ತೆರಳಿತ್ತು. ದಟ್ಟ ಕಾಡಿನ ನಡುವೆ ದಾರಿ ತಪ್ಪಿದ ಹಿನ್ನೆಲೆಯಲ್ಲಿ ಅರ್ಧ ಹಾದಿಯಿಂದಲೇ ವಾಪಸ್ ಬಂದಿದ್ದಾರೆ. ಚಾರಣ ಮಾರ್ಗದಲ್ಲಿ ಮರಗಳು ಬಿದ್ದಿದ್ದರಿಂದ ಮುಂದೆ ಸಾಗಲು ಸಾಧ್ಯವಾಗಲಿಲ್ಲ ಎಂದು ಅವರು ತಿಳಿಸಿದ್ದಾರೆ.

**ಸಮಸ್ಯೆ ಪರಿಹರಿಸಲಾಗಿದೆ: ಅರಣ್ಯ ಇಲಾಖೆ**

ಈ ಕುರಿತು ಉಪ ಅರಣ್ಯ ಸಂರಕ್ಷಣಾಧಿಕಾರಿ ಬೋರಯ್ಯ ಮಾತನಾಡಿ, ಆನ್‌ಲೈನ್ ಬುಕ್ಕಿಂಗ್ ಆರಂಭಿಸಿದ ಬಳಿಕ ಮೊದಲ ಬ್ಯಾಚ್‌ನಲ್ಲಿ ಸ್ವಲ್ಪ ಸಮಸ್ಯೆ ಉಂಟಾಗಿತ್ತು. ತಕ್ಷಣ ಸ್ಥಳ ಪರಿಶೀಲಿಸಿ ಸಮಸ್ಯೆ ಬಗೆಹರಿಸಲಾಗಿದೆ. ಕೆಲವು ಕಡೆ ಮರಗಳು ಬಿದ್ದಿದ್ದು, ಅವುಗಳ ಪಕ್ಕದಲ್ಲೇ ಪರ್ಯಾಯ ಮಾರ್ಗ ನಿರ್ಮಿಸಲಾಗಿದೆ. ಶನಿವಾರ ಒಂದೇ ದಿನ 100ಕ್ಕೂ ಹೆಚ್ಚು ಪ್ರವಾಸಿಗರು ಯಾವುದೇ ಸಮಸ್ಯೆಯಿಲ್ಲದೆ ಚಾರಣ ಮುಗಿಸಿದ್ದಾರೆ ಎಂದು ತಿಳಿಸಿದ್ದಾರೆ. ಮೂವಿ ಮತ್ತು ಟಿವಿ ಶೋಗಳನ್ನು ಸ್ಟ್ರೀಮ್ ಮಾಡುವುದು ನಗರದ ಸ್ಥಳೀಯ ಮಾರ್ಗದರ್ಶಿಗಳನ್ನು ಬಳಸುವುದು ಆದರೆ, ಪ್ರವಾಸಿಗರ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಚಾರಣಕ್ಕೆ ಬರುವವರೊಂದಿಗೆ ಕಡ್ಡಾಯವಾಗಿ ಗೈಡ್‌ಗಳನ್ನು ಕಳುಹಿಸುವುದು ಸೇರಿದಂತೆ ಅಗತ್ಯ ಮೂಲಸೌಕರ್ಯ ಕಲ್ಪಿಸಬೇಕು ಎಂದು ಪ್ರವಾಸಿಗರು ಆಗ್ರಹಿಸಿದ್ದಾರೆ.

# ಕರಡು ಮತದಾರರ ಪಟ್ಟಿ ಪ್ರಕಟಿಸಿದ ಚುನಾವಣಾ ಆಯೋಗ

ಬೆಂಗಳೂರು: ರಾಜ್ಯದಲ್ಲಿ ನಡೆದ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಗೆ ಸಂಬಂಧಿಸಿದಂತೆ 4,46,35,899 ಮತದಾರರ ಕರಡು ಪಟ್ಟಿಯನ್ನು ಚುನಾವಣಾ ಆಯೋಗ ಇಂದು ಪ್ರಕಟಿಸಿದೆ.ಈ ಕುರಿತು ಮುಖ್ಯ ಚುನಾವಣಾಧಿಕಾರಿ ಅನ್ಬು ಕುಮಾರ್ ಅವರು ಮಧ್ಯಾಹ್ನ 3 ಗಂಟೆಗೆ ಸುದ್ದಿಗೋಷ್ಠಿ ನಡೆಸಿ ಅಧಿಕೃತ ಮಾಹಿತಿ ನೀಡಲಿದ್ದಾರೆ. ಎಸ್‌ಐಆರ್ ಪ್ರಕ್ರಿಯೆಯಲ್ಲಿ ಒಟ್ಟು 1,79,64,15 ಮತದಾರರನ್ನು ಎಎಸ್‌ಡಿ (ಂಖಆ) ಪಟ್ಟಿಗೆ ಸೇರ್ಪಡೆ ಮಾಡಲಾಗಿದೆ ಎಂದು ತಿಳಿದುಬಂದಿದೆ.



ಇದೇ ವೇಳೆ, ಎನ್ಯೂಮರೇಷನ್ ಫಾರಂನಲ್ಲಿ ಸಲ್ಲಿಸಿರುವ ಮಾಹಿತಿ ಹಾಗೂ 2002ರ ಮತದಾರರ ಪಟ್ಟಿಯಲ್ಲಿನ ಮಾಹಿತಿಯಲ್ಲಿ ವ್ಯತ್ಯಾಸ ಕಂಡುಬಂದಿರುವ ಹಿನ್ನೆಲೆಯಲ್ಲಿ 43,80,740 ಮತದಾರರಿಗೆ ಇಂದಿನಿಂದ ನೋಟಿಸ್ ಜಾರಿ ಮಾಡುವ ಪ್ರಕ್ರಿಯೆ ಆರಂಭವಾಗಿದೆ. ಮತದಾರರ ಮಾಹಿತಿ ಪರಿಶೀಲನೆಗಾಗಿ ಇಂದಿನಿಂದ ಅಕ್ಟೋಬರ್ 22ರವರೆಗೆ ಒಟ್ಟು 58 ದಿನಗಳ ಕಾಲ ನೋಟಿಸ್ ಜಾರಿ ಹಾಗೂ ಮತದಾರ–ರಿಂದ ಪ್ರತಿಕ್ರಿಯೆ ಪಡೆಯುವ ಪ್ರಕ್ರಿಯೆ ನಡೆಯಲಿದೆ. ಸಂಬಂಧಿಸಿದ ಮತದಾರರು ಅಗತ್ಯ ದಾಖಲೆಗಳನ್ನು ಸಲ್ಲಿಸುವಂತೆ ಚುನಾವಣಾ ಆಯೋಗ ಸೂಚಿಸಲಿದೆ.

ಪ್ರಕ್ರಿಯೆ ಪೂರ್ಣಗೊಂಡ ಬಳಿಕ ಪ್ರಕಟಿಸಲಾದ 4,46,35,899 ಮತದಾರರ ಪೈಕಿ 43,80,740 ಮಂದಿಯ ಮಾಹಿತಿಯಲ್ಲಿ ವ್ಯತ್ಯಾಸ ಅಥವಾ ಮ್ಯಾಪಿಂಗ್ ಸಮಸ್ಯೆ ಕಂಡುಬಂದಿದೆ. ಈ ಪೈಕಿ 20,35,312 ಮತದಾರರ ವೈಯಕ್ತಿಕ ಮಾಹಿತಿಯಲ್ಲಿ ವ್ಯತ್ಯಾಸ ಕಂಡುಬಂದಿದ್ದು, ಉಳಿದ 23,45,428 ಮತದಾರರ ಮ್ಯಾಪಿಂಗ್‌ನಲ್ಲಿ ತಪ್ಪು ಕಂಡುಬಂದಿದೆ ಎಂದು ತಿಳಿದುಬಂದಿದೆ.

**ಬೆಂಗಳೂರಿಗರಿಗೇ ಅತಿ ಹೆಚ್ಚು ನೋಟಿಸ್**

ರಾಜ್ಯದಲ್ಲೇ ಬೆಂಗಳೂರು ನಗರದಲ್ಲಿ ಅತಿ ಹೆಚ್ಚು ಮತದಾರರಿಗೆ ನೋಟಿಸ್ ಜಾರಿಯಾಗಲಿದೆ. ಬೆಂಗಳೂರಿನ ನಾಲ್ಕು ಲೋಕಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಒಟ್ಟು 24,05,990 ಮತದಾರರಿಗೆ ದಾಖಲೆ ಸಲ್ಲಿಸುವಂತೆ ನೋಟಿಸ್ ನೀಡಲು ಚುನಾವಣಾ ಆಯೋಗ ಮುಂದಾಗಿದೆ. ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದಲ್ಲಿ 6,13,003, ಬೆಂಗಳೂರು ಕೇಂದ್ರದಲ್ಲಿ 4,29,364, ಬೆಂಗಳೂರು ನಗರದಲ್ಲಿ 9,45,998 ಹಾಗೂ ಬೆಂಗಳೂರು ದಕ್ಷಿಣದಲ್ಲಿ 4,17,625 ಮತದಾರರಿಗೆ ನೋಟಿಸ್ ನೀಡಲಾಗುತ್ತಿದೆ. ಒಟ್ಟಾರೆ ಬೆಂಗಳೂರಿನ ನಾಲ್ಕು ಕ್ಷೇತ್ರಗಳಲ್ಲಿ 24,05,990 ಮತದಾರರು ನೋಟಿಸ್ ಪಡೆಯಲಿದ್ದಾರೆ.

ರಾಜ್ಯದಲ್ಲಿ ಎಸ್‌ಐಆರ್ ಪ್ರಕ್ರಿಯೆಯ ಮುಂದಿನ ಹಂತವಾಗಿ ಕರಡು ಮತದಾರರ ಪಟ್ಟಿ ಪ್ರಕಟವಾಗಿರುವ ಹಿನ್ನೆಲೆಯಲ್ಲಿ ಮತದಾರರು ಪಟ್ಟಿಯಲ್ಲಿ ತಮ್ಮ ಹೆಸರು, ವಿಳಾಸ ಹಾಗೂ ಇತರೆ ವಿವರಗಳನ್ನು ಪರಿಶೀಲಿಸಿಕೊಳ್ಳುವುದು ಮಹತ್ವದ್ದಾಗಿದೆ. ಮಾಹಿತಿ ವ್ಯತ್ಯಾಸ ಕಂಡುಬಂದಿರುವ ಮತದಾರರಿಗೆ ನೋಟಿಸ್ ಮೂಲಕ ದಾಖಲೆಗಳನ್ನು ಸಲ್ಲಿಸಿ ವಿವರಗಳನ್ನು ಸರಿಪಡಿಸಿಕೊಳ್ಳಲು ಅವಕಾಶ ನೀಡಲಾಗುತ್ತದೆ.

# ನಕಲಿ ಔಷಧಿ ದಂಧೆ : ಕೆಲ ಮೆಡಿಕಲ್ ಸ್ಟೋರ್‌ಗಳಿಗೆ ನೋಟೀಸ್ ಜಾರಿ

ಬೆಂಗಳೂರು: ನಕಲಿ ಔಷಧ ದಂಧೆ ಪ್ರಕರಣದ ತನಿಖೆಯನ್ನು ಚುರುಕುಗೊಳಿಸಿರುವ ಎಸ್‌ಐಟಿ ಅಧಿಕಾರಿಗಳು ಆರೋಪಿಗಳಿಂದ ಔಷಧಿ ಪಡೆದಿರುವ ಮೆಡಿಕಲ್ ಸ್ಟೋರ್‌ನ ಮಾಲೀಕರುಗಳಿಗೆ ನೋಟಿಸ್ ಜಾರಿ ಮಾಡಿದ್ದಾರೆ. ನಗರದ ಹೊರವಲಯದ ಬೆಂಗಳೂರು ದಕ್ಷಿಣ ತಾಲ್ಲೂಕಿನ ಸಿ.ಕೆ ತಾಂಡ್ಯದ ಫಾರ್ಮ್‌ಹೌಸ್‌ನಲ್ಲಿ ನಡೆಯುತ್ತಿದ್ದ ನಕಲಿ ಔಷಧಗಳ ದಂಧೆ ಬಯಲಾದ ಬೆನ್ನಲ್ಲೇ ಈ ಕ್ರಮ ಕೈಗೊಳ್ಳಲಾಗಿದೆ.

ಎಸ್‌ಐಟಿ ರಚನೆಯಾದ ನಂತರ ಸಭೆಗಳನ್ನು ನಡೆಸಿದ ಅಧಿಕಾ–ರಿಗಳು ಈ ದಂಧೆಯ ಆರೋಪಿಗಳಿಂದ ಔಷಧಿ ಖರೀದಿ ಮಾಡಿರುವ ಮೆಡಿಕಲ್ ಸ್ಟೋರ್‌ನ ಮಾಲೀಕರುಗಳನ್ನು ಪತ್ತೆ ಮಾಡಿ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ನೀಡಿದ್ದಾರೆ. ನಗರದ ಚಾಮರಾಜಪೇಟೆ ಮತ್ತು ಕಮರ್ಷಿಲ್‌ಸ್ಟ್ರೀಟ್‌ನ ಕೆಲವು ಮೆಡಿಕಲ್ ಸ್ಟೋರ್‌ಗಳ ಮೇಲೆ ಎಸ್‌ಐಟಿ ಅಧಿಕಾ–ರಿಗಳು ದಾಳಿ ನಡೆಸಿ ಕೆಲವು ಔಷಧಿಗಳನ್ನು ವಶಕ್ಕೆ ಪಡೆದುಕಕೆಲವು ಮೆಡಿಕಲ್ ಸ್ಟೋರ್ ಮಾಲೀಕರು ಈ ಆರೋಪಿಗಳಿಂದ ಎಷ್ಟು ವರ್ಷದಿಂದ ನಕಲಿ ಔಷಧಿಗಳನ್ನು ಖರೀದಿಸುತ್ತಿದ್ದರು. ಯಾವ ,ಯಾವ ಮಾದರಿಯ ಔಷಧಿಗಳನ್ನು ಎಷ್ಟು ,ಎಷ್ಟು ಬೆಲೆಗೆ ಕೊಂಡುಕೊಳ್ಳುತ್ತಿದ್ದರು ಎಂಬ ಮಾಹಿತಿಯನ್ನು ಸಹ ಎಸ್‌ಐಟಿ ಅಧಿಕಾರಿಗಳು ಕಲೆ ಹಾಕುತ್ತಿದ್ದಾರೆ. ಫಾರ್ಮ್‌ಹೌಸ್ ಮೇಲೆ ದಾಳಿ ಮಾಡಿದ ಸಂದರ್ಭದಲ್ಲಿ ತಾವರೆಕೆರೆ ಠಾಣೆ ಪೊಲೀಸರು ನಾಲ್ವರು ಆರೋಪಿಗಳನ್ನು ಬಂಧಿಸಿದ್ದಾರೆ.ಪ್ರಮುಖ ಆರೋಪಿ ಪ್ರಶಾಂತ್ ವಿದೇಶದಲ್ಲಿ ತಲೆ ಮರೆಸಿಕೊಂಡಿದ್ದಾನೆ ಎಂಬ ಮಾಹಿತಿ ಹಿನ್ನಲೆಯಲ್ಲಿ ಎಸ್‌ಐಟಿ ಅಧಿಕಾ–ರಿಗಳು ಅವರ ಪತ್ನಿಯನ್ನು ವಿಚಾರಣೆ ಮಾಡಿದಾಗ ವಿದೇಶದ ವಿಮಾನ ನಿಲ್ದಾಣದ ಕಸ್ಟಮ್ಸ್ ಅಧಿಕಾರಿಗಳು ಬಂಧಿಸಿರುವುದು ತಿಳಿದು ಬಂದಿದೆ. ಅಜರ್‌ಬೈಜಾನ್ ರಾಷ್ಟ್ರದಿಂದ ಕಡಿಮೆ ಬೆಲೆಯ ಔಷಧಿಗಳನ್ನು ಕರ್ನಾಟಕಕ್ಕೆ ತರುವಾಗ ಅಲ್ಲಿನ ವಿಮಾನ ನಿಲ್ದಾಣದಲ್ಲಿ ಕಸ್ಟಮ್ಸ್ ಅಧಿಕಾರಿಗಳು ತಪಾಸಣೆ ನಡೆಸಿದಾಗ ಪ್ರಶಾಂತ್ ಹಾಗೂ ಆತನ ಇಬ್ಬರು ಸಹಚರರು ಸಿಕ್ಕಿಬಿದ್ದಿದ್ದಾರೆ. ಈ ಮಾಹಿತಿ ಆಧಾರದ ಮೇಲೆ ಎಸ್‌ಐಟಿ ಅಧಿಕಾರಿಗಳು ಪ್ರಶಾಂತನನ್ನು ವಶಕ್ಕೆ ಪಡೆಯಲು ಇಂಟರ್‌ಪೋಲ್ ನೆರವು ಪಡೆಯಲಿದ್ದಾರೆ. ಈ ಬಗ್ಗೆ ಪ್ರಕ್ರಿಯೆಗಳು ನಡೆಯುತ್ತಿವೆ.



ಈ ನಮ್ಮ ಧೃತಿ ನ್ಯೂಸ್
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.
ಮೊ: 7353595904

# ಮಹಿಳಾ ಸಬಲೀಕರಣಕ್ಕೆ ನಾಂದಿ ಹಾಡಿದ ಕಲೆ (ಡಾ. ರುಮಾದೇವಿ)

ತನ್ನ ರಾಜ್ಯದ ಸಾಂಪ್ರದಾಯಿಕ ಉಡುಗೆ ಧರಿಸಿದ್ದ ಆಕೆ ಇದೀಗ ಸರಿಸುಮಾರು 50, ಸಾವಿರ ಜನ ಮಹಿಳೆಯರನ್ನು ಸಂಘಟಿಸಿ ಅವರಿಗೆ ತರಬೇತಿ ನೀಡಿ ಸ್ವಾವಲಂಬಿಗಳನ್ನಾಗಿಸಿರುವುದನ್ನು ನೋಡಿದಾಗ ಮನಸ್ಸು ಸಂತಸದಿಂದ ನಡೆಯಿತು ಈ ಕುರಿತು ಹೆಚ್ಚಿನ ಮಾಹಿತಿಯನ್ನು ಪಡೆಯಲು ವಿಡಿಯೋವನ್ನು ಸಂಪೂರ್ಣವಾಗಿ ವೀಕ್ಷಿಸಿದೆ.

ಕೇವಲ ನಾಲ್ಕು ವರ್ಷದವಳು ಇದ್ದಾಗ ರುಮಾದೇವಿ ಎಂಬ ಆ ಹೆಣ್ಣು ಮಗಳು ತನ್ನ ತಾಯಿಯನ್ನು ಕಳೆದುಕೊಂಡಳು. ಮನೆಯ ಹಿರಿ ಮಗಳಾಗಿ ಇದ್ದ ಕಾರಣ ಆಕೆಯ ವಿದ್ಯಾಭ್ಯಾಸ ಎಂಟನೇ ತರಗತಿಗೆ ಮೊಟಕುಗೊಂಡಿತು. ಜೊತೆಗೆ ಮನೆಯ ಉಳಿದೆಲ್ಲ ಮಕ್ಕಳ ಕೆಲಸ ಆಕೆಯ ಪಾಲಿಗೆ ಬಂತು. ಅಂತೆಯೇ ಮನೆಯ ಎಲ್ಲಾ ಕೆಲಸ ಕಾರ್ಯಗಳಲ್ಲೂ ಆಕೆ ನುರಿತಳು. ಅತ್ಯಂತ ಚಿಕ್ಕ ವಯಸ್ಸಿನಲ್ಲಿ ಪಾತ್ರೆ ತೊಳೆಯುವ, ಕಸಗುಡಿಸುವ, ನೆಲ ಒರೆಸುವ ಬಟ್ಟೆ ಒಗೆಯುವ ಅಡುಗೆ ಮಾಡುವ ಎಲ್ಲಾ ಕೆಲಸಗಳನ್ನು ಆಕೆ ಕಲಿತು ಇಡಿ ಕುಟುಂಬದ ನಿರ್ವಹಣೆಯನ್ನು ಮಾಡಲು ಆರಂಭಿಸಿದಳು. ವಿದ್ಯೆಯಂತೂ ನೈವೇದ್ಯವಾಗಿತ್ತು ಆದರೆ ಆಕೆಯ ಕಲಿಯುವ ಹುಮ್ಮಸ್ಸಿಗೆ ಜೊತೆಯಾದದ್ದು ಆಕೆಯ ಗ್ರಾಮದಲ್ಲಿ ಎಲ್ಲ ಮಹಿಳೆಯರು ತಮ್ಮ ಬಿಡುವಿನ ಸಮಯದಲ್ಲಿ. ಮಾಡುತ್ತಿದ್ದ ಕಷಿಧಾಕರಿ ಎಂಬ ಕಸೂತಿ ಕಲೆ. ತನ್ನ ಅಜ್ಜಿಯ ಪಕ್ಕದಲ್ಲಿ ಕುಳಿತುಕೊಂಡು ಆಕೆ ಬಟ್ಟೆಯ ಮೇಲೆ ಅಜ್ಜಿಯ ಬೆರಳುಗಳು ಓಡಾಡುವ ರೀತಿಯನ್ನು ಅತ್ಯಂತ ಗಮನವಿಟ್ಟು ನೋಡುತ್ತಿದ್ದಳು ... ನಿಧಾನವಾಗಿ ತಾನು ಕೂಡ ಆ ಕಲೆಯನ್ನು ಕಲಿತು ತನ್ನದಾಗಿಸಿಕೊಂಡಳು.

16ನೇ ವಯಸ್ಸಿನಲ್ಲಿ ಆಕೆಗೆ ವಿವಾಹವಾಯಿತು.... ಮುಂದಿನ ಒಂದು ವರ್ಷದಲ್ಲಿ ಗಂಡು ಮಗುವಿಗೆ ಆಕೆ ತಾಯಿಯಾದಳು. ಮಗುವಿನ ಉತ್ತಮ ಬೆಳವಣಿಗೆಗೆ ಅತ್ಯವಶ್ಯಕವಾದ ಪೋಷಕಾಂಶಗಳನ್ನು ಸೇರಿಸಲು ಆಕೆಯ ಕುಟುಂಬದ ವರಮಾನದಲ್ಲಿ ಸಾಧ್ಯವಾಗುತ್ತಿರಲಿಲ್ಲ.ಆಕೆ ತನ್ನ ಗರ್ಭಸ್ತ ಅವಧಿಯಲ್ಲಿ ಯಾವುದೇ ರೀತಿಯ



ಪೋಷಕ ಆಹಾರ, ಔಷಧಿ, ಮಾತ್ರೆಗಳನ್ನು ಸೇವಿಸಲು ಸಾಧ್ಯವಾಗದೆ ಹೋಯಿತು ಪರಿಣಾಮವಾಗಿ ಆಕೆಯ ಪ್ರಸವವಾದ ನಂತರ ಹುಟ್ಟಿದ ಗಂಡು ಮಗು ಕೇವಲ 48 ಗಂಟೆಗಳಲ್ಲಿ ತೀರಿಹೋಯಿತು. ಕೇವಲ 18 ರ ಹರೆಯದಲ್ಲಿದ್ದ ಆಕೆ ವಿಧಿ ತನ್ನೊಂದಿಗೆ ಈ ರೀತಿ ಏಕೆ ಆಟವಾಡುತ್ತಿದೆ ಎಂದು ಸದಾ ಚಿಂತಿಸುತ್ತಿದ್ದಳು. ಮಗುವನ್ನು ಕಳೆದುಕೊಂಡ ನೋವಿನಿಂದ ಹೊರಬರಲು ಮುಂದಿನ ಕೆಲವೇ ತಿಂಗಳುಗಳಲ್ಲಿ ಆಕೆ ತನ್ನ ಅಜ್ಜಿಯಿಂದ ಕಲಿತ ಚಿತ್ತಾರದ ಕಸೂತಿ ಕಲೆಯನ್ನು ಬಟ್ಟೆಯ ಮೇಲೆ ಮೂಡಿಸಲು ಆರಂಭಿಸಿದಳು.
ಆಕೆಯ ಚಿತ್ತಾರದ ಕಸೂತಿಗಳನ್ನು ನೋಡಿ ತಮಗೂ ಕಲಿಸಿಕೊಡು ಎಂದು ಗ್ರಾಮದ ಕೆಲ ಮಹಿಳೆಯರು ಮುಂದೆ ಬಂದರು. ಹೀಗೆ ಎಂಟು ಹತ್ತು ಜನ ಹೆಣ್ಣು ಮಕ್ಕಳು ಆಕೆಗೆ ಜೊತೆಗೂಡಿದಾಗ ಅವರೆಲ್ಲರಿಗೂ ಆಕೆ ಪ್ರತಿದಿನ ಮಧ್ಯಾಹ್ನದ ಬಿಡುವಿನ ಸಮಯದಲ್ಲಿ ಈ ಚಿತ್ತಾರದ ಕಲೆಯನ್ನು ಕಲಿಸಲು ಆರಂಭಿಸಿದಳು. ಶುಲ್ಕವಾಗಿ ಅವರು ಕೊಟ್ಟ ಅಲ್ಪ ಸ್ವಲ್ಪ ಹಣವನ್ನು ಉಳಿತಾಯ ಮಾಡಿ ಒಂದು ಸೆಕೆಂಡ್ ಹ್ಯಾಂಡ್ ಹೊಲಿಗೆ ಯಂತ್ರವನ್ನು ಆಕೆ ಖರೀದಿಸಿದಳು. ಮನೆಯಿಂದಲೇ ಚಿಕ್ಕದಾಗಿ ಕಸೂತಿ ಹೊಲಿಗೆಯ ಕಾರ್ಯವನ್ನು ಆರಂಭಿಸಿದ ರುಮಾ ಹಾಗೂ ಆಕೆಯ ತಂಡಕ್ಕೆ ದೊರೆತ ಮೊದಲ ಆರ್ಡರನ್ನು ಕೇವಲ ಮೂರು ದಿನಗಳಲ್ಲಿ ಹಗಲು ರಾತ್ರಿ ಕೆಲಸ ಮಾಡಿ ಅವರು ಪೂರೈಸಿದರು. ಇದು ಅವರಿಗೆ ದೊಡ್ಡ ದೊಡ್ಡ ಕನಸುಗಳನ್ನು ಅಗತ್ಯವಾಗಿದ್ದ ಆತ್ಮವಿಶ್ವಾಸವನ್ನು ತುಂಬಿತು. ತಮ್ಮ ಹಳ್ಳಿ ಮಾತ್ರವಲ್ಲದೆ ಇತರ ಹಳ್ಳಿಗಳಿಗೆ ಕಾಲ್ನಡಿಗೆಯಲ್ಲಿ ನಡೆದು ಹೊಸ ಹೊಸ ಆರ್ಡರ್ಗಳನ್ನು ಹಿಡಿಯಲು ಅವರು ಓಡಾಡಿದರು. 48 ಡಿಗ್ರಿ ತಾಪಮಾನದಲ್ಲಿ ಸುಡುವ ಸೂರ್ಯನ ಬಿಸಿಲಿನಲ್ಲಿ ನೀವು ಮನೆಯಿಂದ ಹೊರಗೆ ಕಾಲಿಡುವ ಅವಶ್ಯಕತೆ ಇಲ್ಲ, ನಾವೇ ನಿಮ್ಮ ಬಳಿ ಬಂದು ಆರ್ಡರ್ಗಳನ್ನು ಪಡೆದು ನಿಮ್ಮ ಕೆಲಸವನ್ನು ಮಾಡಿ ಕೊಡುತ್ತೇವೆ ಎಂದು ಅವರು ಜನರಿಗೆ ಹೇಳುತ್ತಿದ್ದರು. ಹೀಗೆಯೇ ಅವರ ಕಾರ್ಯವ್ಯಾಪ್ತಿಯನ್ನು ಹಿಗ್ಗಿಸುತ್ತ ತಮ್ಮ ಕೆಲಸವನ್ನು ಎಡಬಿಡದೆ ಮಾಡಿದರು. ದಿನೇ ದಿನೇ ಅವರ ಸಂಖ್ಯೆ ಹೆಚ್ಚಾಗುತ್ತಾ ಹೋಯಿತು.
2010ರಲ್ಲಿ ದಿಲ್ಲಿಯಲ್ಲಿ ನಡೆದ ಎಕ್ಸಿಬಿಷನ್ ಒಂದರಲ್ಲಿ ಸರಿ ಸುಮಾರು ಹತ್ತರಿಂದ ಹದಿನೈದು ಸಾವಿರ ರೂಗಳಷ್ಟು ವ್ಯಾಪಾರವಾದಾಗ ಅವರ ಆತ್ಮವಿಶ್ವಾಸ ಹೆಚ್ಚಾಯಿತು.

ಮುಂದೆ ಜೈಪುರದಲ್ಲಿ ಅವರು ತಮ್ಮ ವ್ಯಾಪಾರವನ್ನು ವಿಸ್ತರಿಸಿ ಅಲ್ಲಿನ ಫ್ಯಾಶನ್ ಶೋ ಒಂದರಲ್ಲಿ ಪ್ರಚಾರ ಪಡಿಸಿದರು. ಅಲ್ಲಿ ಅವರ ಕ್ರಿಯಾಶೀಲತೆಗೆ ಸಂದ ಚಪ್ಪಾಳೆಯನ್ನು ಇನ್ನು ಮರೆಯಲು ಸಾಧ್ಯವಾಗಿಲ್ಲ ಆ ಚಪ್ಪಾಳೆ ಕೇವಲ ನನ್ನೊಬ್ಬಳ ದಾಗಿರಲಿಲ್ಲ ನಮ್ಮ ಇಡೀ ತಂಡದ್ದಾಗಿತ್ತು ಎಂದು ಆಕೆ ಹೇಳುತ್ತಾರೆ. ಪ್ರತಿಯೊಬ್ಬ ಮುಖ ಮಹಿಳೆಯ ಕೈಯಲ್ಲಿರುವ ಸೂಜಿಯದ್ದಾಗಿತ್ತು.... ಕಾರಣ ನಾವೆಲ್ಲರೂ ಜೊತೆಯಾಗಿದ್ದಾಗ ನಮ್ಮ ಒಗ್ಗಟ್ಟಿಗಿಂತ ಬಲಿಷ್ಠವಾದದ್ದು ಮತ್ತಾವುದೂ ಇಲ್ಲ ಎಂಬುದರ ಅರಿವು ನಮಗಾಗಿತ್ತು ಎಂದು ಆಕೆ ಹೆಮ್ಮೆಯಿಂದ ಹೇಳುತ್ತಾರೆ.

ಲಂಡನ್ ಫ್ಯಾಶನ್ ವೀಕ್ ನಲ್ಲಿ ಭಾಗವಹಿಸಿರುವ ಅವರು ರಾಜೀವಿಕ ( ರಾಜಸ್ಥಾನ ಲೈವ್ಲಿ ಹುಡ್ ಮಿಷನ್) ದ ಬ್ರಾಂಡ್ ಅಂಬಾಸಿಡರ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಆಕೆಯ ಈ ಕಾರ್ಯ ಚಟುವಟಿಕೆಗೆ ಭಾರತ ಸರ್ಕಾರದಿಂದ 2018ರಲ್ಲಿ ನಾರಿ ಶಕ್ತಿ ಪುರಸ್ಕಾರ ದೊರೆತಿದ್ದು ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪ್ರಶಸ್ತಿ ಕೂಡ ಪಡೆದುಕೊಂಡಿದ್ದಾರೆ.
ಇದೀಗ ಸರಿ ಸುಮಾರು 50 ಸಾವಿರ ಜನ ಮಹಿಳೆಯರು ಇವರೊಂದಿಗೆ ಕೈಜೋಡಿಸಿದ್ದು ಆರ್ಥಿಕವಾಗಿ ಸ್ವಾವಲಂಬನೆಯನ್ನು ಹೊಂದಿ ಮಹಿಳಾ ಸಬಲೀಕರಣಕ್ಕೆ ನಾಂದಿ ಹಾಡಿದ್ದಾರೆ
ಇಂತಹ ಮಹಿಳೆಯರು ಮತ್ತಷ್ಟು ಹೆಚ್ಚಿನ ಸಂಖ್ಯೆಯಲ್ಲಿ ನಮ್ಮೊಂದಿಗೆ ಕೈಜೋಡಿಸಲಿ ಎಂಬ ಆಶಯ ಅವರದ್ದು ಅಂಥವರಿಗೆ ಸದಾ ವಿಜಯ ಲಭಿಸಲಿ ಎಂಬ ಆಶಯದೊಂದಿಗೆ



ವೀಣಾ ಹೇಮಂತ್ ಗೌಡ ಪಾಟೀಲ್

# ಗೋಮಯದಿಂದ ತಯಾರಾಗುವ ವಿಭೂತಿ ಬಸವಣ್ಣನ ಆರಾಧನೆಯಲ್ಲಿ ಪವಿತ್ರತೆಯ ಸಂಕೇತ

ಭಾರತೀಯ ಸಂಸ್ಕೃತಿ ಮತ್ತು ಧಾರ್ಮಿಕ ಪರಂಪರೆಯಲ್ಲಿ ವಿಭೂತಿಗೆ ವಿಶೇಷವಾದ ಸ್ಥಾನವಿದೆ. ಶಿವನ ಆರಾಧನೆಯಲ್ಲಿ ಹಣೆಗೆ ವಿಭೂತಿ ಧರಿಸುವುದು ಕೇವಲ ಒಂದು ಆಚರಣೆಯಲ್ಲ; ಅದು ಪವಿತ್ರತೆ, ಸರಳತೆ, ವೈರಾಗ್ಯ ಮತ್ತು ಜೀವನದ ನಶ್ವರತೆಯನ್ನು ನೆನಪಿಸುವ ಸಂಕೇತವಾಗಿದೆ. ವಿಶೇಷವಾಗಿ ಗ್ರಾಮೀಣ ಮತ್ತು ಸಾಂಪ್ರದಾಯಿಕ ಧಾರ್ಮಿಕ ಆಚರಣೆಗಳಲ್ಲಿ ಗೋಮಯದಿಂದ ತಯಾರಿಸುವ ವಿಭೂತಿಗೆ ವಿಶಿಷ್ಟ ಮಹತ್ವವಿದೆ.

**ಗೋಮಯದಿಂದ ವಿಭೂತಿ ತಯಾರಿಸುವ ಪರಂಪರೆ**

ಸಾಂಪ್ರದಾಯಿಕ ವಿಧಾನದಲ್ಲಿ ಆರೋಗ್ಯಕರ ಹಸುವಿನ ಒಣಗಿದ ಗೋಮಯವನ್ನು ಸಂಗ್ರಹಿಸಿ, ಅದನ್ನು ಸೂಕ್ತ ರೀತಿಯಲ್ಲಿ ಸುಟ್ಟು ದೊರೆಯುವ ಬೂದಿಯನ್ನು ಸಂಸ್ಕರಿಸಿ ವಿಭೂತಿಯಾಗಿ ಬಳಸುವ ಪದ್ಧತಿ ಹಲವು ಪ್ರದೇಶಗಳಲ್ಲಿ ಕಂಡುಬರುತ್ತದೆ. ಈ ಬೂದಿಯನ್ನು ಸಾಮಾನ್ಯ ಬೂದಿಯಂತೆ ನೋಡದೆ, ಧಾರ್ಮಿಕ ಶುದ್ಧತೆ ಮತ್ತು ಶಿವತತ್ತ್ವದೊಂದಿಗೆ ಸಂಬಂಧಿಸಿದ ಪವಿತ್ರ ವಸ್ತುವಾಗಿ ಪರಿಗಣಿಸಲಾಗುತ್ತದೆ. ಗೋಮಯವನ್ನು ಭಾರತೀಯ ಗ್ರಾಮೀಣ ಜೀವನದಲ್ಲಿ ಬಹುಕಾಲದಿಂದಲೇ ವಿವಿಧ ರೀತಿಯಲ್ಲಿ ಬಳಸಲಾಗುತ್ತಿದೆ. ಮನೆಗಳ ನೆಲ ಮತ್ತು ಅಂಗಳದ ಸಾಂಪ್ರದಾಯಿಕ ಸ್ವಚ್ಛತೆ, ಹೋಮ–ಹವನಗಳಂತಹ ಧಾರ್ಮಿಕ ಆಚರಣೆಗಳು ಹಾಗೂ ಕೃಷಿ ಚಟುವಟಿಕೆಗಳಲ್ಲಿ ಗೋಮಯಕ್ಕೆ ಸ್ಥಾನವಿದೆ. ಇದೇ ಪರಂಪರೆಯ ಒಂದು ಭಾಗವಾಗಿ ಗೋಮಯದಿಂದ ದೊರೆಯುವ ಬೂದಿಯನ್ನು ಧಾರ್ಮಿಕವಾಗಿ ಬಳಸುವ ಪದ್ಧತಿಯೂ ಬೆಳೆದು ಬಂದಿದೆ.

**ವಿಭೂತಿ ಏನನ್ನು ಸೂಚಿಸುತ್ತದೆ**

ಶೈವ ಪರಂಪರೆಯಲ್ಲಿ ವಿಭೂತಿಗೆ ಅತ್ಯಂತ ಆಳವಾದ ತಾತ್ವಿಕ ಅರ್ಥವಿದೆ. ಮನುಷ್ಯನ ದೇಹ, ಸಂಪತ್ತು, ಅಧಿಕಾರ, ಅಹಂಕಾರ ಮತ್ತು ಭೌತಿಕ ಜೀವನ ಎಲ್ಲವೂ ಒಂದು ದಿನ ನಶ್ವರವಾಗುತ್ತವೆ ಎಂಬ ಸತ್ಯವನ್ನು ಬೂದಿ ನೆನಪಿಸುತ್ತದೆ. ಹಣೆಗೆ ವಿಭೂತಿ ಧರಿಸುವಾಗ, "ಈ ದೇಹವೂ ಒಂದು ದಿನ ಪಂಚಭೂತಗಳಲ್ಲಿ ಲೀನವಾಗಲಿದೆ" ಎಂಬ ಜೀವನದ ಸತ್ಯವನ್ನು ಸ್ಮರಿಸುವ ಸಂಕೇತವೆಂದು ಭಕ್ತರು ಭಾವಿಸುತ್ತಾರೆ. ವಿಭೂತಿಯ ಮೂರು ಗೆರೆಗಳನ್ನು ಧರಿಸುವ ತ್ರಿಪುಂಡ್ರ ಶೈವ ಸಂಪ್ರದಾಯದಲ್ಲಿ ಪ್ರಮುಖವಾಗಿದೆ. ಇದು ಶಿವನ ಆರಾಧನೆ, ಆತ್ಮಜ್ಞಾನ ಮತ್ತು ಅಹಂಕಾರದ ನಿವಾರಣೆಯೊಂದಿಗೆ ಸಂಬಂಧಿಸಿದೆ.




**ಬಸವಣ್ಣನವರ ಚಿಂತನೆ ಮತ್ತು ವಿಭೂತಿ**

ಕರ್ನಾಟಕದ ಸಾಮಾಜಿಕ ಹಾಗೂ ಧಾರ್ಮಿಕ ಇತಿಹಾಸದಲ್ಲಿ ಬಸವಣ್ಣನವರು ಅತ್ಯಂತ ಮಹತ್ವದ ವ್ಯಕ್ತಿ. 12ನೇ ಶತಮಾನದಲ್ಲಿ ಅವರು ಸಮಾಜದಲ್ಲಿ ಸಮಾನತೆ, ಕಾಯಕ, ದಾಸೋಹ ಮತ್ತು ಮಾನವೀಯ ಮೌಲ್ಯಗಳಿಗೆ ಒತ್ತು ನೀಡಿದರು.

**ಬಸವಣ್ಣನವರ ವಚನ ಪರಂಪರೆಯಲ್ಲಿ ಬಾಹ್ಯ**

ಆಚರಣೆಗಿಂತ ಅಂತರಂಗದ ಶುದ್ಧತೆ ಮತ್ತು ಸತ್ಯನಿಷ್ಠ ಜೀವನಕ್ಕೆ ಹೆಚ್ಚಿನ ಮಹತ್ವ ನೀಡಲಾಗಿದೆ. ಆದ್ದರಿಂದ ವಿಭೂತಿಯನ್ನು ಧರಿಸುವುದರ ಅರ್ಥವೂ ಕೇವಲ ಹಣೆಗೆ ಬೂದಿ ಹಚ್ಚಿಕೊಳ್ಳುವುದರಲ್ಲಿ ಸೀಮಿತವಾಗದೆ, ಅದರ ಹಿಂದಿರುವ ತಾತ್ವಿಕ ಸಂದೇಶವನ್ನು ಅರ್ಥಮಾಡಿಕೊಳ್ಳುವುದರಲ್ಲಿ ಇದೆ. "ಕಾಯಕವೇ ಕೈಲಾಸ" ಎಂಬ ಬಸವಣ್ಣನವರ ಪ್ರಸಿದ್ಧ ಚಿಂತನೆ ನಮಗೆ ದುಡಿಮೆ ಮತ್ತು ಪ್ರಾಮಾಣಿಕ ಜೀವನದ ಮಹತ್ವವನ್ನು ತಿಳಿಸುತ್ತದೆ. ಅದೇ ರೀತಿ ವಿಭೂತಿ ಮನುಷ್ಯನಿಗೆ ಅಹಂಕಾರಕ್ಕಿಂತ ಸರಳತೆ ಮುಖ್ಯ ಎಂಬ ಸಂದೇಶವನ್ನು ನೀಡುತ್ತದೆ.

**ಬಸವಣ್ಣ ಮತ್ತು ಬಸವ ಸಂಸ್ಕೃತಿಯಲ್ಲಿ ಗೋವಿನ ಮಹತ್ವ**

ಕರ್ನಾಟಕದ ಗ್ರಾಮೀಣ ಬದುಕಿನಲ್ಲಿ ಹಸು ಕೇವಲ ಸಾಕುಪ್ರಾಣಿಯಲ್ಲ. ಕೃಷಿ ಆಧಾರಿತ ಸಮಾಜದಲ್ಲಿ ಹಾಲು, ಮೊಸರು, ತುಪ್ಪ ಸೇರಿದಂತೆ ಹಲವು ಉಪಯೋಗಗಳನ್ನು ನೀಡುವ ಗೋವು ಕುಟುಂಬ ಮತ್ತು ಗ್ರಾಮೀಣ ಆರ್ಥಿಕತೆಯ ಪ್ರಮುಖ ಭಾಗವಾಗಿತ್ತು. ಗೋಮಯವೂ ಗ್ರಾಮೀಣ ಜೀವನದಲ್ಲಿ ಹಲವು ಸಾಂಪ್ರದಾಯಿಕ ಬಳಕೆಗಳನ್ನು ಹೊಂದಿತ್ತು. ಹೀಗಾಗಿ ಗೋಮಯದಿಂದ ದೊರೆಯುವ ಬೂದಿಯನ್ನು ಧಾರ್ಮಿಕ ಆಚರಣೆಗಳಲ್ಲಿ ಬಳಸುವ ಪರಂಪರೆ ಗ್ರಾಮೀಣ ಸಂಸ್ಕೃತಿಯೊಂದಿಗೆ ಆಳವಾಗಿ ಬೆಸೆದುಕೊಂಡಿದೆ.

**ವಿಭೂತಿ ಭಕ್ತಿ ಮತ್ತು ತತ್ವಜ್ಞಾನದ ಸೇತುವೆ**

ವಿಭೂತಿಯನ್ನು ಧರಿಸುವ ಸಂಪ್ರದಾಯದ ವಿಶೇಷತೆ ಎಂದರೆ ಅದು ಭಕ್ತಿ ಮತ್ತು ತತ್ವಜ್ಞಾನ ಎರಡನ್ನೂ ಒಂದಾಗಿಸುತ್ತದೆ. ಬಿಳಿ ಬೂದಿಯ ಮೂರು ಗೆರೆಗಳು ಹೊರಗೆ ಸರಳವಾಗಿ ಕಾಣಿಸಿದರೂ, ಅವು ಮನುಷ್ಯನ ಒಳಗಿನ ಅಹಂಕಾರವನ್ನು ಕಡಿಮೆ ಮಾಡಿಕೊಂಡು ಸತ್ಯ, ಶುದ್ಧತೆ ಮತ್ತು ಸಾತ್ವಿಕ ಜೀವನದತ್ತ ಸಾಗುವ ಸಂದೇಶವನ್ನು ನೀಡುತ್ತವೆ. ಬಸವಣ್ಣನವರ ವಚನಗಳ ಮೂಲ ಆಶಯವೂ ಇದೇ ರೀತಿಯಲ್ಲಿ ಮನುಷ್ಯನ ಒಳಗಿನ ಪರಿವರ್ತನೆಗೆ ಒತ್ತು ನೀಡುತ್ತದೆ. ದೇವರನ್ನು ಕೇವಲ ದೇವಸ್ಥಾನದಲ್ಲಿ ಹುಡುಕುವುದಕ್ಕಿಂತ, ತನ್ನ ಕಾಯಕದಲ್ಲಿ, ನಡತೆಯಲ್ಲಿ ಮತ್ತು ಮಾನವೀಯತೆಯಲ್ಲಿ ಕಂಡುಕೊಳ್ಳಬೇಕು ಎಂಬ ಚಿಂತನೆ ಅವರ ವಚನ ಪರಂಪರೆಯಲ್ಲಿ ಸ್ಪಷ್ಟವಾಗಿ ಕಾಣುತ್ತದೆ.

**ಇಂದಿನ ಕಾಲದಲ್ಲೂ ಉಳಿದಿರುವ ಪರಂಪರೆ**

ಆಧುನಿಕ ಜೀವನಶೈಲಿ ವೇಗವಾಗಿ ಬದಲಾಗುತ್ತಿದ್ದರೂ, ವಿಭೂತಿ ಧರಿಸುವ ಸಂಪ್ರದಾಯ ಇನ್ನೂ ಅನೇಕ ಕುಟುಂಬಗಳು ಮತ್ತು ಭಕ್ತರಲ್ಲಿ ಮುಂದುವರಿದಿದೆ. ಶಿವರಾತ್ರಿ, ಬಸವ ಜಯಂತಿ, ಸೋಮವಾರದ ಶಿವಪೂಜೆ, ದೇವಸ್ಥಾನಗಳ ಜಾತ್ರೆ ಹಾಗೂ ವಿವಿಧ ಧಾರ್ಮಿಕ ಕಾರ್ಯಕ್ರಮಗಳಲ್ಲಿ ವಿಭೂತಿಗೆ ವಿಶೇಷ ಸ್ಥಾನವಿದೆ. ಆದರೆ ಯಾವುದೇ ಸಾಂಪ್ರದಾಯಿಕ ವಸ್ತುವನ್ನು ಬಳಸುವಾಗ ಅದರ ತಯಾರಿಕಾ ವಿಧಾನ, ಸ್ವಚ್ಛತೆ ಮತ್ತು ಸುರಕ್ಷತೆಯ ಬಗ್ಗೆ ಗಮನ ನೀಡುವುದು ಮುಖ್ಯ. ಸಾಂಪ್ರದಾಯಿಕವಾಗಿ ತಯಾರಿಸಿದ ವಿಭೂತಿಯನ್ನು ಬಳಸುವವರು ಸ್ವಚ್ಛವಾದ ಮೂಲದಿಂದ ಪಡೆದ, ಸರಿಯಾಗಿ



ಸಂಸ್ಕರಿಸಿದ ಉತ್ಪನ್ನವನ್ನೇ ಬಳಸುವುದು ಒಳಿತು.

**ಪರಂಪರೆಯ ಹಿಂದಿರುವ ಸಂದೇಶ**

ಗೋಮಯದಿಂದ ತಯಾರಾಗುವ ವಿಭೂತಿಯ ಕಥೆ ಕೇವಲ ಒಂದು ಧಾರ್ಮಿಕ ವಸ್ತುವಿನ ಕಥೆಯಲ್ಲ. ಇದು ಭಾರತೀಯ ಗ್ರಾಮೀಣ ಜೀವನ, ಗೋಸಂಸ್ಕೃತಿ, ಶಿವಭಕ್ತಿ ಮತ್ತು ತಾತ್ವಿಕ ಚಿಂತನೆಗಳ ನಡುವೆ ಇರುವ ಸಂಬಂಧವನ್ನು ತೋರಿಸುತ್ತದೆ. ವಿಭೂತಿ ನಮಗೆ ಒಂದು ಸರಳವಾದ ಆದರೆ ಆಳವಾದ ಸತ್ಯವನ್ನು ನೆನಪಿಸುತ್ತದೆ ? ಭೌತಿಕ ಜೀವನ ಶಾಶ್ವತವಲ್ಲ; ಆದರೆ ನಾವು ಬದುಕುವ ರೀತಿಯೇ ನಮ್ಮ ನಿಜವಾದ ಗುರುತು. ಬಸವಣ್ಣನವರ ಕಾಯಕ, ದಾಸೋಹ, ಸಮಾನತೆ ಮತ್ತು ಅಂತರಂಗ ಶುದ್ಧತೆಯ ಸಂದೇಶದೊಂದಿಗೆ ಈ ತಾತ್ವಿಕ ಅರ್ಥವನ್ನು ನೋಡಿದಾಗ, ವಿಭೂತಿ ಕೇವಲ ಬೂದಿಯಾಗದೆ ಒಂದು ಜೀವನದರ್ಶನದ ಸಂಕೇತವಾಗುತ್ತದೆ.

ಹಣೆಯ ಮೇಲೆ ಮೂಡುವ ಮೂರು ಬಿಳಿ ಗೆರೆಗಳು ಮನುಷ್ಯನಿಗೆ ಪ್ರತಿದಿನವೂ ಒಂದು ಸಂದೇಶ ನೀಡುತ್ತವೆ ಅಹಂಕಾರವನ್ನು ಬಿಟ್ಟು, ಸತ್ಯವನ್ನು ಅಳವಡಿಸಿಕೊಂಡು, ಪ್ರಾಮಾಣಿಕ ಕಾಯಕದ ಮೂಲಕ ಮಾನವೀಯ ಬದುಕನ್ನು ಕಟ್ಟಿಕೊಳ್ಳಬೇಕು. ಅದೇ ವಿಭೂತಿಯ ನಿಜವಾದ ಅರ್ಥ; ಅದೇ ನಮ್ಮ ಸಂಸ್ಕೃತಿಯ ಆಂತರಿಕ ಸಂದೇಶ.

ವಿನಾಯಕ ಬಿ. ತಿಪ್ಪಣ್ಣನವರ

# ಪತಿಯ ಹೊಟ್ಟೆ ಸೀಳಿ ಕರುಳನ್ನು ಚೀಲಕ್ಕೆ ತುಂಬಿದ ಪತ್ನಿ



ಕುರುಕ್ಷೇತ್ರ: ಮಹಿಳೆಯೊಬ್ಬರು ಪತಿಯನ್ನು ಕೊಲೆ ಮಾಡಿ, ಬಳಿಕ ಆತನ ಹೊಟ್ಟೆ ಬಗೆದು ಹೊರಬಂದಿದ್ದ ಕರುಳನ್ನು ಪ್ಲಾಸ್ಟಿಕ್ ಚೀಲಕ್ಕೆ ತುಂಬಿದ ಭೀಕರ ಘಟನೆ ಹರಿಯಾಣದ ಕುರುಕ್ಷೇತ್ರದಲ್ಲಿ ನಡೆದಿದೆ. ಪೆಹೋವಾ ರಸ್ತೆಯ ರಾಜ್ ಪ್ಯಾಲೇಸ್ ಸಮೀಪದ ಮನೆಯೊಂದರಲ್ಲಿ ಈ ಘಟನೆ ನಡೆದಿದೆ. ಮೃತನನ್ನು ಉತ್ತರ ಪ್ರದೇಶದ ಧಾಂಪುರ ಗ್ರಾಮದ ನಿವಾಸಿ ರಾಜೇಶ್ (40) ಎಂದು ಗುರುತಿಸಲಾಗಿದೆ. ಅವರು ಸುಮಾರು ಒಂದು ವರ್ಷದಿಂದ ಪತ್ನಿ ವಿಮ್ಲಾ ದೇವಿ ಜತೆ ಇಲ್ಲಿ ವಾಸಿಸುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ರಾಜೇಶ್ ಖಾಸಗಿ ಕಂಪನಿಯೊಂದರಲ್ಲಿ ನೀರು ಪೂರೈಕೆ ಸಿಬ್ಬಂದಿಯಾಗಿ ಕೆಲಸ ಮಾಡುತ್ತಿದ್ದರು. ಮನೆಯ ಮಾಲೀಕ ರಿಂಕು ಅವರ ಪ್ರಕಾರ, ಶನಿವಾರ ಸಂಜೆ ಸುಮಾರು 5 ಗಂಟೆಗೆ ದಂಪತಿ ಜೋರಾಗಿ ಜಗಳವಾಡುತ್ತಿರುವುದು ಕೇಳಿಸಿತ್ತು. ಮಹಡಿಗೆ ತೆರಳಿ ನೋಡಿದಾಗ ರಾಜೇಶ್ ರಕ್ತದ ಮಡುವಿನಲ್ಲಿ ಬಿದ್ದಿದ್ದು, ಹೊಟ್ಟೆಯಲ್ಲಿ ಆಳವಾದ ಗಾಯವಾಗಿತ್ತು. ಅಲ್ಲದೆ, ವಿಮ್ಲಾ ದೇವಿ ಆತನ ಹೊಟ್ಟೆಯಿಂದ ಹೊರಬಂದಿದ್ದ ಕರುಳನ್ನು ಪ್ಲಾಸ್ಟಿಕ್ ಚೀಲಕ್ಕೆ ಹಾಕುತ್ತಿದ್ದುದನ್ನು ಕಂಡಿದ್ದಾಗಿ ಪೊಲೀಸರಿಗೆ ತಿಳಿಸಿದ್ದಾರೆ. ಮನೆಯ ಮಾಲೀಕನನ್ನು ನೋಡಿದ ದೇವಿ ಗಾಬರಿಗೊಂಡು ಮಹಡಿಯಿಂದ ಕೆಳಗೆ ಜಿಗಿದಿದ್ದಾರೆ. ಈ ವೇಳೆ ಗಂಭೀರವಾಗಿ ಗಾಯಗೊಂಡ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.ಈ ನಡುವೆ, ಮರಣೋತ್ತರ ಪರೀಕ್ಷೆಯಲ್ಲಿ ಮೃತನ ಯಕೃತ್ತಿನ ಅರ್ಧದಷ್ಟು ಭಾಗ ಹಾಗೂ ಬಲ ಮೂತ್ರಪಿಂಡ ನಾಪತ್ತೆಯಾಗಿರುವುದು ಪತ್ತೆಯಾಗಿದೆ. ಅಂಗಗಳು ನಾಪತ್ತೆಯಾಗಿರುವುದಕ್ಕೂ ಕೊಲೆಗೂ ಸಂಬಂಧವಿದೆಯೇ ಎಂಬ ಬಗ್ಗೆಯೂ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಘಟನಾ ಸ್ಥಳದಿಂದ ವಿವಿಧ ಗಾತ್ರದ ಮೂರು ಚಾಕುಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ಮನೆಯ ಮಾಲೀಕರ ಪ್ರಕಾರ, ದೇವಿ ಸಾಂಪ್ರದಾಯಿಕ ಚಿಕಿತ್ಸೆ ಹಾಗೂ ಮಾಟ-ಮಂತ್ರದಂತಹ ಆಚ-ರಣೆಗಳಲ್ಲಿ ತೊಡಗಿಸಿಕೊಂಡಿದ್ದರು. ದಂಪತಿ ಆಗಾಗ್ಗೆ ಜಗಳವಾಡುತ್ತಿದ್ದರು ಎನ್ನಲಾಗಿದೆ. ಹಲವು ವರ್ಷಗಳ ಹಿಂದೆ ವಿವಾಹವಾಗಿದ್ದ ದಂಪತಿಗೆ ಮಕ್ಕಳಿರಲಿಲ್ಲ. ಆದರೆ, ಕೊಲೆಯ ನಿಖರ ಕಾರಣ ಇನ್ನೂ ತಿಳಿದುಬಂದಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ. ದೇವಿ ಸದ್ಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಆರೋಗ್ಯ ಸುಧಾ-ರಿಸಿದ ಬಳಿಕ ಅವರನ್ನು ವಿಚಾರಣೆ ನಡೆಸಲಾಗುವುದು ಎಂದು ಆದ-ರ್ಶ ಪೊಲೀಸ್ ಠಾಣೆಯ ಸುರೇಂದ್ರ ಸಂಧು ತಿಳಿಸಿದ್ದಾರೆ. ಬಳಿಕ ಬಂಧನ ಹಾಗೂ ವಿಚಾರಣೆಗೆ ಸಂಬಂಧಿಸಿದಂತೆ ಕಾನೂನು ಪ್ರಕ್ರಿಯೆ ಕೈಗೊಳ್ಳಲಾಗುವುದು ಎಂದು ಹೇಳಿದ್ದಾರೆ. ಕೊಲೆಯ ಹಿಂದಿನ ಕಾರಣ ಹಾಗೂ ಯಕೃತ್ತು ಮತ್ತು ಮೂತ್ರಪಿಂಡ ನಾಪತ್ತೆಯಾಗಿರುವುದರ ನಡುವಿನ ಸಂಬಂಧದ ಬಗ್ಗೆಯೂ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

# ರೈಲಿನೊಳಗೆ ಸೂಟ್‌ಕೇಸ್‌ನಲ್ಲಿ ಯುವತಿಯ ತುಂಡಾದ ಭಾಗಗಳು ಪತ್ತೆ



ಚೆನ್ನೈ: ಚೆನ್ನೈನಿಂದ ನವದೆಹಲಿಗೆ ತೆರಳುತ್ತಿದ್ದ ಎಕ್ಸ್‌ಪ್ರೆಸ್ ರೈಲಿನ ಸೂಟ್‌ಕೇಸ್‌ನಲ್ಲಿ ಕೊಳೆತ ಸ್ಥಿತಿಯಲ್ಲಿ ಯುವತಿಯ ದೇಹದ ಭಾಗಗಳು ಪತ್ತೆಯಾಗಿರುವ ಘಟನೆ ಬೆಳಕಿಗೆ ಬಂದಿದೆ.ಪ್ರಕರಣದ ತನಿಖೆ ಕೈಗೊಂಡ ರೈಲ್ವೆ ಪೊಲೀಸರು ಮೃತ ಯುವತಿಯನ್ನು ಒಡಿಶಾ ಮೂಲದ ಹಯುಥನ್ ನಿಶಾ (28) ಎಂದು ಗುರುತಿಸಿದ್ದಾರೆ.

ಕಳೆದ ಆ.5ರಂದು ಚೆನ್ನೈ ಸೆಂಟ್ರಲ್‌ನಿಂದ ದೆಹಲಿಗೆ ತೆರಳುತ್ತಿದ್ದ ರೈಲು ಆಗ್ರಾ ನಿಲ್ದಾಣ ತಲುಪಿದಾಗ, ಬೋಗಿಯಲ್ಲಿದ್ದ ಸೂಟ್‌ಕೇಸ್‌ನಿಂದ ತೀವ್ರ ದುರ್ವಾಸನೆ ಬರುತ್ತಿರುವುದು ಗಮನಕ್ಕೆ ಬಂದಿದೆ. ರೈಲ್ವೆ ಪೊಲೀಸರು ಸೂಟ್‌ಕೇಸ್ ಪರಿಶೀಲಿಸಿದಾಗ ಅದರಲ್ಲಿ ಕತ್ತರಿಸಿದ ಮಾನವ ದೇಹದ ಭಾಗಗಳು ಪತ್ತೆಯಾಗಿದ್ದವು. ಆಗ್ರಾ ಪೊಲೀಸರಿಂದ ಮಾಹಿತಿ ಪಡೆದ ಚೆನ್ನೈ ಪೊಲೀಸರು ಚೆನ್ನೈ ಸೆಂಟ್ರಲ್ ರೈಲು ನಿಲ್ದಾಣದ ಸಿಸಿಟಿವಿ ದೃಶ್ಯಗಳನ್ನು ಪರಿಶೀಲಿಸಿದ್ದಾರೆ. ಈ ವೇಳೆ ಇಬ್ಬರು ವ್ಯಕ್ತಿಗಳು ಅದೇ ಮಾದ-ರಿಯ ಟ್ರಾಲಿ ಸೂಟ್‌ಕೇಸ್‌ನೊಂದಿಗೆ ರೈಲು ಹತ್ತಿರುವುದು ದೃಶ್ಯಾವಳಿಯಲ್ಲಿ ದಾಖಲಾಗಿತ್ತು. ತನಿಖೆಯ ಆಧಾರದ ಮೇಲೆ ಶಂಕಿತರನ್ನು ಮಾಣಿಕ್ ಉದ್ದೀನ್ ಲಸ್ಕರ್ ಮತ್ತು ಭಾಗಬತಿ ಮಾ-ಝಿ ಎಂದು ಗುರುತಿಸಿದ ಪೊಲೀಸರು, ಚೆನ್ನೈ ಹೊರವಲಯದ ಗೂಡುವಾಂಚೇರಿಯಲ್ಲಿರುವ ಅವರ ಬಾಡಿಗೆ ಮನೆ ಮೇಲೆ ದಾಳಿ ನಡೆಸಿದರು. ಮನೆಯ ಶೋಧದ ವೇಳೆ ಅಡುಗೆ ಪಾತ್ರೆಯೊಂದರಲ್ಲಿ ಮಹಿಳೆಯ ದೇಹದ ಮತ್ತಷ್ಟು ಕೊಳೆತ ಭಾಗಗಳು ಪತ್ತೆಯಾಗಿವೆ. ಇದರಿಂದ ಪ್ರಕರಣ ಮತ್ತಷ್ಟು ಗಂಭೀರ ಸ್ವರೂಪ ಪಡೆದುಕೊಂಡಿದೆ. ಇಬ್ಬರೂ ಶಂಕಿತರು ಸದ್ಯ ತಲೆಮರೆಸಿಕೊಂಡಿದ್ದು, ಅವರ ಪತ್ತೆಗಾಗಿ ವಿಶೇಷ ತನಿಖಾ ತಂಡಗಳನ್ನು ರಚಿಸಲಾಗಿದೆ. ಆಗ್ರಾ ರೈಲಿನಲ್ಲಿ ಪತ್ತೆಯಾದ ಸೂಟ್‌ಕೇಸ್‌ನಲ್ಲಿದ್ದ ದೇಹದ ಭಾಗಗಳು ಹಾಗೂ ಚೆನ್ನೈನ ಮನೆಯಲ್ಲಿ ಪತ್ತೆಯಾದ ದೇಹದ ಭಾಗಗಳು ಒಂದೇ ಮಹಿಳೆಗೆ ಸೇರಿವೆಯೇ ಎಂಬುದನ್ನು ವೈಜ್ಞಾನಿಕವಾಗಿ ಖಚಿತಪಡಿಸಿಕೊಳ್ಳಲು ಮಾದರಿಗಳನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಮೃತ ಮಹಿಳೆಯ ಮಗ ಚೆನ್ನೈನಲ್ಲಿ ನಾಪತ್ತೆ ದೂರು ದಾಖಲಿಸಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಹಣಕಾಸಿನ ವಿವಾದ ಅಥವಾ ಅಕ್ರಮ ಸಂಬಂಧದ ಹಿನ್ನೆಲೆಯಲ್ಲಿ ಈ ಹತ್ಯೆ ನಡೆದಿರಬಹುದೇ ಎಂಬುದೂ ಸೇ-ರಿದಂತೆ ವಿವಿಧ ಆಯಾಮಗಳಲ್ಲಿ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ಈ ನಮ್ಮ ಧೃತಿ ನ್ಯೂಸ್
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.
ಮೊ: 7353595904

# H1N1 ಸೋಂಕು : ಶಾಲಾ-ಕಾಲೇಜುಗಳಲ್ಲಿ ಮುಂಜಾಗ್ರತಾ ಕ್ರಮಕ್ಕೆ ಮಾರ್ಗಸೂಚಿ ಪ್ರಕಟ



ಬೆಂಗಳೂರು: ರಾಜ್ಯದಲ್ಲಿ ಎಚ್1ಎನ್1 ಸೋಂಕು ಹರಡುತ್ತಿರುವ ಹಿನ್ನೆಲೆಯಲ್ಲಿ ಶಾಲಾ-ಕಾಲೇಜುಗಳಲ್ಲಿ ಮುಂಜಾಗ್ರತಾ ಕ್ರಮ ಕೈಗೊಳ್ಳುವಂತೆ ಮಾರ್ಗಸೂಚಿ ರವಾನಿಸಲಾಗುವುದು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಯು.ಟಿ. ಖಾದರ್ ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಳೆದ ಜನವರಿಯಿಂದ ರಾಜ್ಯದಲ್ಲಿ 4,212 ಎಚ್1ಎನ್1 ಪ್ರಕರಣಗಳು ಪತ್ತೆಯಾಗಿವೆ. ಅದರಲ್ಲೂ ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಹೆಚ್ಚಿನ ಪ್ರಕರಣಗಳು ವರದಿಯಾಗಿವೆ ಎಂದು ತಿಳಿಸಿದರು.

ಸಾಂಕ್ರಾಮಿಕ ರೋಗಗಳ ಕು-ರಿತು ಜನರಲ್ಲಿ ಹೆಚ್ಚಿನ ಜಾಗೃತಿ ಅಗತ್ಯವಿದೆ. ಸಾರ್ವಜನಿಕರು ಮುಂಜಾಗ್ರತಾ ಕ್ರಮಗಳನ್ನು ಪಾಲಿಸಬೇಕು. ಬಿಸಿ ನೀರನ್ನೇ ಕುಡಿಯಬೇಕು ಹಾಗೂ ಹೋಟೆಲ್‌ಗಳಲ್ಲಿಯೂ ಬಿಸಿನೀರನ್ನು ಒದಗಿಸಬೇಕು. ಜ್ವರ ಇರುವವರು ಜನರ ನಡುವೆ ಓಡಾಡುವುದನ್ನು ನಿಯಂತ್ರಿಸಬೇಕು. ಎರಡು-ಮೂರು ದಿನಗಳ ಬಳಿಕವೂ ಜ್ವರ ಕಡಿಮೆಯಾಗದಿದ್ದರೆ ವೈದ್ಯಕೀಯ ಪರೀಕ್ಷೆಗೆ ಒಳಗಾಗಬೇಕು ಎಂದು ಸಲಹೆ ನೀಡಿದರು. ಮಾಧ್ಯಮಗಳಲ್ಲಿ ವರದಿಯಾದಂತೆ ಯಾವುದೇ ಶಾಲೆಯಲ್ಲಿ ಎಚ್1ಎನ್1 ಸೋಂಕು ವ್ಯಾಪಕವಾಗಿ ಹರಡಿರುವ ಬಗ್ಗೆ ವರದಿಯಾಗಿಲ್ಲ. ಒಂದು ಶಾಲೆಯ ಇಬ್ಬರು ಶಿಕ್ಷಕರಿಗೆ ಜ್ವರ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಅವರು ಶಾಲೆಗೆ ಬಂದಿರಲಿಲ್ಲ. ಬಳಿಕ ಯಾವುದೇ ವಿದ್ಯಾರ್ಥಿಗಳಿಗೂ ಸೋಂಕು ಹರಡಿರುವುದು ಕಂಡುಬಂದಿಲ್ಲ. ಇದನ್ನೇ ಸೋಂಕು ವ್ಯಾಪಕವಾಗಿ ಹರಡಿದೆ ಎಂದು ಪ್ರಚಾರ ಮಾಡಲಾಗಿದೆ. ಇದು ಸತ್ಯವಲ್ಲ ಎಂದು ಸಚಿವರು ಸ್ಪಷ್ಟಪಡಿಸಿದರು.

ಗೊಂದಲ ನಿವಾರಿಸುವ ಉದ್ದೇಶದಿಂದ ರಾಜ್ಯದ ಎಲ್ಲ ಶಾಲಾ-ಕಾಲೇಜುಗಳಿಗೆ ಸಾಂಕ್ರಾಮಿಕ ರೋಗಗಳ ಸಂದರ್ಭದಲ್ಲಿ ಅನುಸರಿಸಬೇಕಾದ ಸುರಕ್ಷತಾ ಕ್ರಮಗಳ ಕುರಿತು ಮಾರ್ಗಸೂಚಿ ರವಾನಿಸಲಾಗುವುದು ಎಂದರು. ಎಚ್1ಎನ್1 ಸೋಂಕು ಪತ್ತೆಯಾದರೂ ಚಿಕಿತ್ಸೆ ನೀಡಲು ರಾಜ್ಯ ಆರೋಗ್ಯ ಇಲಾಖೆ ಸಿದ್ಧವಾಗಿದೆ. ಅಗತ್ಯವಿರುವ ಕಡೆ ಪ್ರತ್ಯೇಕ ಬೆಡ್‌ಗಳ ವ್ಯವಸ್ಥೆ ಮಾಡಲಾಗಿದೆ. ಔಷಧಿಗಳ ದಾಸ್ತಾನು ಲಭ್ಯವಿದ್ದು, ಅಗತ್ಯ ಔಷಧಿಗಳ ಖರೀದಿಗೆ ಸಂಬಂಧಿಸಿದ ಟೆಂಡರ್ ಪ್ರಕ್ರಿಯೆಗಳಿಗೆ ಅನುಮೋದನೆ ನೀಡಲಾಗಿದೆ. 15 ದಿನಗಳಲ್ಲಿ ಅಗತ್ಯ ಔಷಧಿಗಳನ್ನು ಖರೀದಿಸಿ ಜಿಲ್ಲಾ ಕೇಂದ್ರಗಳಿಗೆ ಸರಬರಾಜು ಮಾಡಲಾಗುವುದು. ತುರ್ತು ಅಗತ್ಯವಿದ್ದಲ್ಲಿ ಜಿಲ್ಲಾ ಮಟ್ಟದಲ್ಲಿಯೂ ಔಷಧಿ ಖರೀದಿಸಲು ಅನುಮತಿ ನೀಡಲಾಗಿದೆ ಎಂದು ಹೇಳಿದರು.

**ನಕಲಿ ಔಷಧಿ ಪ್ರಕರಣ ತನಿಖೆ ಮುಂದುವರಿಕೆ**

ನಕಲಿ ಔಷಧಿಗಳ ಕುರಿತ ತನಿಖೆ ಪ್ರಗತಿಯಲ್ಲಿದೆ. ಅಧಿಕೃತ ಮಾಹಿತಿ ದೊರೆತ ಬಳಿಕ ಅದನ್ನು ಸಾರ್ವಜನಿಕರೊಂದಿಗೆ ಹಂಚಿಕೊಳ್ಳಲಾಗುವುದು. ಸದ್ಯದ ಮಾಹಿತಿಯ ಪ್ರಕಾರ ಯಾವುದೇ ಸರ್ಕಾರಿ ಆಸ್ಪತ್ರೆಗಳಿಗೆ ನಕಲಿ ಔಷಧಿಗಳು ಸರಬರಾಜಾಗಿಲ್ಲ. ಎಲ್ಲೆಲ್ಲಿ ಇಂತಹ ಔಷಧಿಗಳು ಸರಬರಾಜಾಗಿವೆ ಎಂಬುದರ ಕುರಿತು ಪರಿಶೀಲನೆ ನಡೆಯುತ್ತಿದೆ. ಮಾಹಿತಿ ದೊರೆತ ತಕ್ಷಣ ಕ್ರಮ ಕೈಗೊಳ್ಳಲಾಗುವುದು ಎಂದರು. ಕೆಲವು ಸಂದರ್ಭಗಳಲ್ಲಿ ನಕಲಿ ಮತ್ತು ಅಸಲಿ ಔಷಧಿಗಳನ್ನು ಗುರುತಿಸುವುದು ಕಷ್ಟವಾಗುತ್ತಿದೆ. ಗುಪ್ತಚರ ವಿಭಾಗದ ಅಧಿಕಾರಿಗಳು ನಕಲಿ ಔಷಧಿಗಳು ಎಲ್ಲೆಲ್ಲಿ ತಯಾರಾಗುತ್ತಿವೆ ಹಾಗೂ ಯಾವ ಪ್ರದೇಶಗಳಿಗೆ ಸರಬರಾಜಾಗುತ್ತಿವೆ ಎಂಬ ಬಗ್ಗೆ ಮಾಹಿತಿ ಕಲೆಹಾಕುತ್ತಿದ್ದಾರೆ ಎಂದು ಹೇಳಿದರು.

**ಕೃತಕ ಆಹಾರ ಪದಾರ್ಥಗಳ ವಿರುದ್ಧ ಕ್ರಮ**

ಕೃತಕವಾಗಿ ಉತ್ಪಾದಿಸುವ ಆಹಾರ ಪದಾರ್ಥಗಳು ಅಪಾಯಕಾರಿಯಾಗಿರುವ ಹಿನ್ನೆಲೆಯಲ್ಲಿ ಅವುಗಳನ್ನು ನಿಷೇಧಿಸಲಾಗಿದೆ. ಆರೋಗ್ಯ ಇಲಾಖೆಯ ಅಧಿಕಾರಿಗಳಿಗೆ ಒಂದು ವರ್ಷದವರೆಗೆ ಮಾತ್ರ ನಿಷೇಧ ವಿಧಿಸುವ ಅವಕಾಶವಿದೆ. ಈ ಕುರಿತು ಕೇಂದ್ರ ಕಾಯ್ದೆಯಲ್ಲಿಯೂ ತಿದ್ದುಪಡಿ ಅಗತ್ಯವಿದ್ದು, ಕೇಂದ್ರ ಆರೋಗ್ಯ ಸಚಿವರೊಂದಿಗೆ ಪತ್ರ ವ್ಯವಹಾರ ನಡೆಸಲಾಗಿದೆ ಎಂದು ಸಚಿವರು ತಿಳಿಸಿದರು.

# ಸಚಿವ ನಾಗೇಂದ್ರ ರಾಜೀನಾಮೆಗೆ ಆಗ್ರಹಿಸಿ ವಿಧಾನಸೌಧಕ್ಕೆ ಮುತ್ತಿಗೆ ಹಾಕಲು ವಿಪಕ್ಷಗಳ ವಿಫಲ ಯತ್ನ




ಬೆಂಗಳೂರು: ಸಚಿವ ಬಿ. ನಾಗೇಂದ್ರ ಅವರ ರಾಜೀನಾಮೆಗೆ ಒತ್ತಾಯಿಸಿ ಬಿಜೆಪಿ-ಜೆಡಿ-ಎಸ್ ಮತ್ತೆ ಸರ್ಕಾರದ ವಿರುದ್ಧ ಸಮರ ಸಾರಿದ್ದು, ವಿಧಾನಸೌಧಕ್ಕೆ ಮುತ್ತಿಗೆ ಹಾಕಲು ನಡೆಸಿದ ಯತ್ನವನ್ನು ಪೊಲೀಸರು ವಿಫಲಗೊಳಿಸಿದ್ದಾರೆ.ಸರ್ಕಾರದ ವಿರುದ್ಧ ಇದೇ ಮೊದಲ ಬಾರಿಗೆ ಗಟ್ಟಿ ಧ್ವನಿಯಲ್ಲಿ ಪ್ರತಿಭಟನೆ ನಡೆಸಿದ ಎರಡೂ ಪಕ್ಷಗಳ ಶಾಸಕರು ವಿಧಾನಸೌಧದ ನಾಲ್ಕು ಗೇಟ್‌ಗಳನ್ನು ಗು-ರಿಯಾಗಿಸಿಕೊಂಡು ಮುತ್ತಿಗೆ ಹಾಕಲು ಯತ್ನಿಸಿದರು.

ಫ್ರೀಡಂಪಾರ್ಕ್‌ನಿಂದ ಒಂದು ತಂಡ, ರಾಜಭವನದಿಂದ ಮತ್ತೊಂದು ತಂಡ, ಶಾಸಕರ ಭವನದಿಂದ ಮೂರನೇ ತಂಡ ಹಾಗೂ ಮಾಹಿತಿ ಹಕ್ಕು ಆಯೋಗದಿಂದ ನಾಲ್ಕನೇ ತಂಡ ಹೀಗೆ ಒಟ್ಟು ನಾಲ್ಕು ತಂಡಗಳಲ್ಲಿ ವಿಧಾನಸೌಧಕ್ಕೆ ಮುತ್ತಿಗೆ ಹಾಕಲು ಯತ್ನಿಸಲಾಯಿತು. ಆದರೆ, ಪೊಲೀಸರು ಸರ್ಪಗಾವಲು ಹಾಕಿ ಮಾರ್ಗಮಧ್ಯೆಯೇ ಬಿಜೆಪಿ ಮತ್ತು ಜೆಡಿಎಸ್ ಶಾಸಕರನ್ನು ವಶಕ್ಕೆ ಪಡೆದರು. ವಿಧಾನಸಭೆ ಪ್ರತಿಪಕ್ಷ ನಾಯಕ ಆರ್. ಅಶೋಕ್, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ವಿಧಾನಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಸೇ-ರಿದಂತೆ ಬಿಜೆಪಿ ಮುಖಂಡರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.ಮಾಜಿ ಸಚಿವ ರಾಜೂಗೌಡ, ಶಾಸಕ ಮುನಿರತ್ನ ಸೇರಿದಂತೆ ಹಲವು ನಾಯಕರು ಹಾಗೂ ಬಿಜೆಪಿ ಕಾರ್ಯಕರ್ತರು ಫ್ರೀಡಂಪಾರ್ಕ್‌ನಲ್ಲಿ ಜಮಾಯಿಸಿ ನಾಗೇಂದ್ರ ವಿರುದ್ಧ ಘೋಷಣೆಗಳನ್ನು ಕೂಗಿದರು. ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣ ದುರ್ಬಳಕೆ ಪ್ರಕರಣದಲ್ಲಿ ಆರೋಪ ಎದು-ರಿಸುತ್ತಿರುವ ನಾಗೇಂದ್ರ ಅವರು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಹಾಗೂ ವಾಲ್ಮೀಕಿ ಸಮುದಾಯಕ್ಕೆ ಕಾಂಗ್ರೆಸ್ ದ್ರೋಹ ಮಾಡಿದೆ ಎಂಬ ಬರಹವಿರುವ ಫಲಕಗಳನ್ನು ಹಿಡಿದು ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ವಿಧಾನಸೌಧದ ಸುತ್ತಲೂ ಪೊಲೀಸರು ಭದ್ರತೆ ಹೆಚ್ಚಿಸಿ, ವಿವಿಧ ಗೇಟ್‌ಗಳಿಗೆ ಬ್ಯಾರಿಕೇಡ್‌ಗಳನ್ನು ಅಳವಡಿಸಿದ್ದರು. ಸದನದ ಕಲಾಪ ನಡೆಯುತ್ತಿದ್ದ ಹಿನ್ನೆಲೆಯಲ್ಲಿ ಸಿಬ್ಬಂದಿ ಮತ್ತು ಗುರುತಿನ ಚೀಟಿ ಹೊಂದಿರುವವ-ರಿಗೆ ಮಾತ್ರ ಪ್ರವೇಶಕ್ಕೆ ಅವಕಾಶ ಕಲ್ಪಿಸಲಾಗಿ-ತ್ತು. ಪ್ರತಿಭಟನಾಕಾರರು ಏಕಾಏಕಿ ಮುನ್ನುಗ್ಗಲು ಯತ್ನಿಸಿದಾಗ ತಳ್ಳಾಟ-ನೂಕಾಟದ ಪರಿಸ್ಥಿತಿ ನಿರ್ಮಾಣವಾಯಿತು. ವಿಧಾನಸೌಧದ ಪ್ರವೇಶದ್ವಾರಗಳ ಬಳಿಯೇ ಪ್ರತಿಭಟನಾಕಾರರನ್ನು ಪೊಲೀಸರು ವಶಕ್ಕೆ ಪಡೆದರು.ಕೆಲ ಕಾರ್ಯಕರ್ತರು ಪೊಲೀಸರ ಕೈಗೆ ಸಿಗದೆ ಮೆಟ್ರೊ ನಿಲ್ದಾಣದತ್ತ ತೆರಳಲು ಯತ್ನಿಸಿದಾಗ, ಅವರನ್ನು ಪೊಲೀಸರು ಬೆನ್ನಟ್ಟಿ ವಶಕ್ಕೆ ಪಡೆದರು.

ವಿಧಾನಸಭೆಯ ಪ್ರತಿಪಕ್ಷ ನಾಯಕ ಆರ್. ಅಶೋಕ್ ಮತ್ತು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ನೇತೃತ್ವದಲ್ಲಿ ನೂರಾರು ಕಾರ್ಯಕರ್ತರು ಫ್ರೀಡಂಪಾರ್ಕ್‌ನಿಂದ ವಿಧಾನಸೌಧದ ಕಡೆಗೆ ಮೆರವಣಿಗೆ ತೆರಳಿ ಮುತ್ತಿಗೆ ಹಾಕಲು ಯತ್ನಿಸಿದರು. ಪ್ರತಿಭಟನೆಯ ಹಿನ್ನೆಲೆಯಲ್ಲಿ ವಿಧಾನಸೌಧದ ಸುತ್ತಮುತ್ತ ಬಿಗಿ ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗಿತ್ತು. ಎಲ್ಲ ಪ್ರಮುಖ ಗೇಟ್‌ಗಳ ಬಳಿ ನಾಕಾಬಂದಿ ನಡೆಸಲಾಗಿದ್ದು, ಪ್ರತಿಭಟನಾಕಾರರು ಒಳನುಗ್ಗದಂತೆ ಪೊಲೀಸರು ಕಟ್ಟುನಿಟ್ಟಿನ ಕ್ರಮ ಕೈಗೊಂಡರು. ಸಚಿವ ಬಿ. ನಾಗೇಂದ್ರ ಅವರ ರಾಜೀನಾಮೆ ವಿಚಾರವಾಗಿ ಬಿಜೆಪಿ ಮತ್ತು ಜೆಡಿ-ಎಸ್ ಕಳೆದ ಹಲವು ದಿನಗಳಿಂದ ವಿಧಾನಸಭೆ ಹಾಗೂ ವಿಧಾನಪರಿಷತ್‌ನಲ್ಲೂ ಪ್ರತಿಭಟನೆ ನಡೆಸುತ್ತಿವೆ. ಕಳೆದ ವಾರ ಹಲವು ದಿನಗಳ ಕಾಲ ಪ್ರತಿಪಕ್ಷದ ಪ್ರತಿಭಟನೆಯಿಂದ ಸದನದ ಕಲಾಪಕ್ಕೂ ಅಡ್ಡಿಯುಂಟಾಗಿತ್ತು.

**2024ರಲ್ಲಿ ಬೆಳಕಿಗೆ ಬಂದ ಪ್ರಕರಣ**

ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣ ಅಕ್ರಮ ವರ್ಗಾವಣೆ ಪ್ರಕರಣ 2024ರಲ್ಲಿ ಬೆಳಕಿಗೆ ಬಂದಿತ್ತು. ನಿಗಮದ ಲೆಕ್ಕಪರಿಶೋಧಕ ಅಧೀಕ್ಷಕ ಪಿ. ಚಂದ್ರಶೇಖರನ್ ಆತ್ಮಹತ್ಯೆ ಮಾಡಿಕೊಂಡು ಬರೆದಿದ್ದ ಪತ್ರದಲ್ಲಿ ಹಣ-ಕಾಸು ಅಕ್ರಮಗಳ ಆರೋಪಗಳು ಕೇಳಿಬಂದ ಬಳಿಕ ಪ್ರಕರಣ ಭಾರಿ ರಾಜಕೀಯ ವಿವಾದಕ್ಕೆ ಕಾರಣವಾಗಿತ್ತು. ನಾಗೇಂದ್ರ ಅವರನ್ನು ಸಂಪುಟದಿಂದ ಕೈಬಿಡುವವರೆಗೂ ಹೋರಾಟ ಮುಂದುವರಿಸುವುದಾಗಿ ಬಿಜೆಪಿ ನಾಯಕರು ಹೇಳಿದ್ದಾರೆ. ವಾಲ್ಮೀಕಿ ಸಮುದಾಯಕ್ಕೆ ಸೇರಿದ ಕಲ್ಯಾಣ ನಿಧಿಯ ದುರ್ಬಳಕೆಯ ಆರೋಪ ಎದುರಿಸುತ್ತಿರುವ ವ್ಯಕ್ತಿ ಸಚಿವ ಸ್ಥಾನದಲ್ಲಿ ಮುಂದುವರಿಯುವುದು ನೈತಿಕವಾಗಿ ಮತ್ತು ಸಾಂವಿಧಾನಿಕವಾಗಿ ಸರಿಯಲ್ಲ ಎಂಬುದು ಪ್ರತಿಪಕ್ಷದ ವಾದವಾಗಿದೆ.

# ನ್ಯಾಟೋ ಮಾದರಿಯ ಮುಸ್ಲಿಂ ರಾಷ್ಟ್ರಗಳ ಮೆಕ್ಕಾ ರಕ್ಷಣಾ ಒಕ್ಕೂಟಕ್ಕೆ ಇರಾನ್‌ಗೆ ಆಹ್ವಾನ



ಟೆಹ್ರಾನ್: ಅಮೆರಿಕದೊಂದಿಗೆ ಉದ್ವಿಗ್ನತೆ ಮುಂದುವರಿದಿರುವ ನಡುವೆಯೇ ಸೌದಿ ಅರೇಬಿಯಾ, ಪಾಕಿಸ್ತಾನ ಮತ್ತು ಟರ್ಕಿ ದೇಶಗಳು ಆ.7ರಂದು ಸಹಿ ಹಾಕಿರುವ ಮಹತ್ವದ ಮೆಕ್ಕಾ ಜಂಟಿ ರಕ್ಷಣಾ ಒಪ್ಪಂದಕ್ಕೆ ಸೇರ್ಪಡೆಗೊಳ್ಳುವಂತೆ ಇರಾನ್‌ಗೆ ಅಧಿಕೃತ ಆಹ್ವಾನ ನೀಡಲಾಗಿದೆ. ಟೆಹ್ರಾನ್‌ಗೆ ಈ ಆಹ್ವಾನ ಬಂದಿದ್ದು, ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತಿದೆ ಎಂದು ಇರಾನ್ ಸಂಸತ್ತಿನ ಸುದ್ದಿ ಸಂಸ್ಥೆಯ ಮುಖ್ಯಸ್ಥ ಮೆಹ್ದಿ ರಹೀಮಿ ತಿಳಿಸಿದ್ದಾರೆ ಎಂದು ಅಲ್ ಮಯಾದೀನ್ ವರದಿ ಮಾಡಿದೆ.

ಪಾಕಿಸ್ತಾನದ ಸೇನಾ ಮುಖ್ಯಸ್ಥ ಅಸಿಮ್ ಮುನೀರ್ ಅವರು ಶೀಘ್ರದಲ್ಲೇ ಟೆಹ್ರಾನ್‌ಗೆ ಭೇಟಿ ನೀಡಲಿರುವ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ. ಹೀಗಾಗಿ ರಕ್ಷಣಾ ಒಕ್ಕೂಟದ ವಿಸ್ತರಣೆಯ ಕುರಿತ ಚರ್ಚೆಗೆ ಹೆಚ್ಚಿನ ಮಹತ್ವ ಬಂದಿದೆ. ಸೌದಿ ಅರೇಬಿಯಾ, ಪಾಕಿಸ್ತಾನ ಮತ್ತು ಟರ್ಕಿ ಸಹಿ ಹಾಕಿರುವ ಒಪ್ಪಂದದ ಪ್ರಕಾರ, ಮೂರು ದೇಶಗಳ ಪೈಕಿ ಯಾವುದೇ ಒಂದು ದೇಶದ ಮೇಲೆ ಸಶಸ್ತ್ರ ದಾಳಿ ನಡೆದರೂ ಅದನ್ನು ಮೂರೂ ದೇಶಗಳ ಮೇಲಿನ ದಾಳಿ ಎಂದು ಪರಿಗಣಿಸಲಾಗುತ್ತದೆ.ಪಶ್ಚಿಮ ಏಷ್ಯಾದಲ್ಲಿ ಉದ್ವಿಗ್ನತೆ ಹೆಚ್ಚುತ್ತಿರುವ ಸಂದರ್ಭದಲ್ಲೇ ಈ ಬೆಳವಣಿಗೆ ನಡೆದಿದೆ. ಈ ಐತಿಹಾಸಿಕ ಹೆಜ್ಜೆಯನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸ್ವಾಗತಿಸಿದ್ದಾರೆ.

**ಏನಿದು 'ಮುಸ್ಲಿಂ ನ್ಯಾಟೋ'?**

ಸೌದಿ ಅರೇಬಿಯಾ, ಟರ್ಕಿ ಮತ್ತು ಪಾಕಿಸ್ತಾನ ದೇಶಗಳ ನಡುವೆ ಏರ್ಪಟ್ಟಿರುವುದು ತ್ರಿಪಕ್ಷೀಯ ಕಾರ್ಯತಂತ್ರದ ರಕ್ಷಣಾ ಮತ್ತು ಮಿಲಿಟರಿ ಸಹಕಾರ ಒಪ್ಪಂದ. ಆ.7ರಂದು ಸೌದಿ ಅರೇಬಿಯಾದ ಮೆಕ್ಕಾದ ಅಲ್-ಸಫಾ ಅರಮನೆಯಲ್ಲಿ ಈ ಒಪ್ಪಂದಕ್ಕೆ ಅಧಿಕೃತವಾಗಿ ಸಹಿ ಹಾಕಲಾಗಿದೆ. ಪಶ್ಚಿಮ ಏಷ್ಯಾದಲ್ಲಿ ಹೆಚ್ಚುತ್ತಿರುವ ಪ್ರಾದೇಶಿಕ ಉದ್ವಿಗ್ನತೆ ಹಾಗೂ ಯುದ್ಧದ ಸನ್ನಿವೇಶಗಳ ಹಿನ್ನೆಲೆಯಲ್ಲಿ ಈ ಮೂರು ಪ್ರಮುಖ ಮುಸ್ಲಿಂ ರಾಷ್ಟ್ರಗಳು ಒಟ್ಟಾಗಿ ಈ ನಿರ್ಧಾರ ಕೈಗೊಂಡಿವೆ. ಒಪ್ಪಂದದ ಪ್ರಮುಖ ಅಂಶವೆಂದರೆ, ಮೈತ್ರಿಕೂಟದ ಯಾವುದೇ ಒಂದು ಸದಸ್ಯ ರಾಷ್ಟ್ರದ ಮೇಲೆ ಹೊರಗಿನಿಂದ ಸಶಸ್ತ್ರ ದಾಳಿ ನಡೆದರೆ, ಅದನ್ನು ಮೂರೂ ದೇಶಗಳ ಮೇಲಿನ ದಾಳಿ ಎಂದು ಪರಿಗಣಿಸುವುದು. ಈ ವ್ಯವಸ್ಥೆಯು ನ್ಯಾಟೋದ ಸಾಮೂಹಿಕ ರಕ್ಷಣಾ ತತ್ವವನ್ನು ಹೋಲುತ್ತದೆ. ಹೀಗಾಗಿ ಇದನ್ನು ಕೆಲವರು 'ಮುಸ್ಲಿಂ ನ್ಯಾಟೋ' ಅಥವಾ 'ಸುನ್ನಿ ಭದ್ರತಾ ಒಕ್ಕೂಟ' ಎಂದು ಕರೆಯುತ್ತಿದ್ದಾರೆ.

**ಬಾಂಗ್ಲಾದೇಶಕ್ಕೂ ಒಲವು**

ಇತ್ತ ಬಾಂಗ್ಲಾದೇಶವೂ ಈ ಒಕ್ಕೂಟಕ್ಕೆ ಸೇರುವ ಬಗ್ಗೆ ಸಕಾರಾತ್ಮಕ ಒಲವು ತೋರಿದೆ ಎನ್ನಲಾಗಿದೆ. ಬಾಂಗ್ಲಾದೇಶದ ವಿದೇಶಾಂಗ ವ್ಯವಹಾರಗಳ ನೂತನ ರಾಜ್ಯ ಸಚಿವ ಹುಮಾಯೂನ್ ಕಬೀರ್ ಅವರು ಒಪ್ಪಂದದ ಭಾಗವಾಗುವ ಸಾಧ್ಯತೆಗಳ ಕುರಿತು ಮಾತನಾಡಿದ್ದು, ರಾಜತಾಂತ್ರಿಕ ಮಾತುಕತೆಗಳ ಮೂಲಕ ಪಾಕಿಸ್ತಾನದೊಂದಿಗಿನ ದ್ವಿಪಕ್ಷೀಯ ಸಂಬಂಧವನ್ನು ಬಲಪಡಿಸಲು ಬಯಸುವುದಾಗಿ ತಿಳಿಸಿದ್ದಾರೆ.

ಇರಾನ್ ಸೇರ್ಪಡೆಗೊಂಡರೆ ಒಕ್ಕೂಟದ ಭೌಗೋಳಿಕ ವ್ಯಾಪ್ತಿ ಮತ್ತು ಕಾರ್ಯತಂತ್ರದ ಮಹತ್ವ ಮತ್ತಷ್ಟು ಹೆಚ್ಚುವ ಸಾಧ್ಯತೆಯಿದೆ. ಇದೇ ವೇಳೆ, ಪಶ್ಚಿಮ ಏಷ್ಯಾದಲ್ಲಿ ಬದಲಾಗುತ್ತಿರುವ ಭದ್ರತಾ ಸಮೀಕರಣಗಳು ಹಾಗೂ ಭಾರತದ ಮೇಲೆ ಉಂಟಾಗಬಹುದಾದ ರಾಜತಾಂತ್ರಿಕ ಮತ್ತು ಕಾರ್ಯತಂತ್ರದ ಪರಿಣಾಮಗಳ ಬಗ್ಗೆಯೂ ಚರ್ಚೆ ಆರಂಭವಾಗಿದೆ.

Publisher and Owned by CHANDRAKANTA From Near Durgamma Temple Dyampur, Koppal District- 583232 Printed at VINAYA Printers, VINAYA Publication Word No.01 Ballary Pootwer, Bhagynagar, Koppal- 583238, Editor : CHANDRAKANTA enammadhruthinews@gmail.com